₹ 5/-

# ನೇಸರು

## ತಿಂಗಳೋಲೆ

PAGES 20

AUGUST 2024 | Nesaru Tingalole | Vol. XLII - 08

# INDEPENDENCE DAY




ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಅಸೋಸಿಯೇಷನ್‌ನಲ್ಲಿ

ಶನಿವಾರ ದಿನಾಂಕ 27/07/24 ರಂದು ಮೈಸೂರು ಅಸೋಷಿಯೇಷನ್‌ನ ಸದಸ್ಯರಿಗಾಗಿ ಒಳಾಂಗಣ ಆಟವನ್ನು ಶಶಿಕಾಂತ ಜೋಶಿಯವರ ನೇತೃತ್ವದಲ್ಲಿ ಏರ್ಪಡಿಸಲಾಗಿತ್ತು. ಮುಂಬಯಿಯಲ್ಲಿ ಮಳೆಯು ಬಿರುಸಿನಿಂದ ಬರುತ್ತಿದ್ದರೂ ಸಹ ಬಹು ಸಂಖ್ಯೆಯಲ್ಲಿ ಸದಸ್ಯರು ಬಂದು ಭಾಗವಹಿಸಿದ್ದರು.





ಸದಸ್ಯರನ್ನು ಸ್ಪರ್ಧೆಗೆ ಸಿದ್ದಗೊಳಿಸಲು ಕೇರಮ್ (Carrom), ಚನ್ನೆಮಣೆ ಆಟದ ಜೊತೆಗೆ ಜೋಶಿ ದಂಪತಿಗಳು "Sequences" ಎಂಬ ಹೊಸ ಆಟದ ಪರಿಚಯವನ್ನು ಮಾಡಿಸಿದರು. ಬಹಳಷ್ಟು ಜನ ಈ ಆಟದ ಮಜ ಸವಿದರು. ಬಿರುಸಿನ ಮಳೆಗೆ ಬಿಸಿ ಬಿಸಿಯಾದ ಈರುಳ್ಳಿ ಬಜೆ





ಹಾಗೂ ಕಾಫಿಯ ಜೊತೆಗೆ ಒಳಾಂಗಣ ಆಟವನ್ನು ಆಡಲು ಎಲ್ಲರನ್ನು ಹುರಿದುಂಬಿಸಲಾಯಿತು. ಬಂದ ಸದಸ್ಯರನ್ನು 5 ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿಗೆ ಬೇರೆ ಬೇರೆ ಹೆಸರುಗಳನ್ನು (ಹೊಯ್ಸಳ, ಕದಂಬ, ವಿಜಯನಗರ, ಮೈಸೂರು ಹಾಗೂ ರಾಷ್ಟ್ರಕೂಟ) ಇಡಲಾಯಿತು.

**ಮೊದಲನೆಯ ಆಟ:** ವಸ್ತುಗಳನ್ನು ನೋಡಿ ಗುರುತಿಸಿ ಅವುಗಳ ಹೆಸರುಗಳನ್ನು ಬರೆಯುವುದು. ಯಾವ ಗುಂಪು ಹೆಚ್ಚು ವಸ್ತುಗಳ ಹೆಸರುಗಳನ್ನು ಬರೆಯುತ್ತಾರೋ ಅವರಿಗೆ ಬಹುಮಾನವನ್ನು ಕೊಡಲಾಯಿತು.

**ಎರಡನೆಯ ಆಟ:** ದಿನಬಳಕೆಯೆ ವಸ್ತುಗಳನ್ನು ನೋಡಿ ಅದರ ಖಚಿತ ಬೆಲೆಯನ್ನು ಬರೆಯುವುದು. ಯಾವ ಗುಂಪು ಖಚಿತ ಬೆಲೆಯ ಹತ್ತಿರದ ಬೆಲೆಯನ್ನು ಬರೆಯುತ್ತರೆಯೊ ಆ ಗುಂಪಿಗೆ ಬಹುಮಾನವನ್ನು ನೀಡಲಾಯಿತು. ಪ್ರತಿಯೊಂದು ಆಟಕ್ಕೆ ಗುಂಪಿನ ಮರುವಿಂಗಡನೆ ಮಾಡಲಾಗುತ್ತಿತ್ತು.





(ಪುಟ 19ರಲ್ಲಿ ಮುಂದುವರಿಯುವುದು)

ನೇಸರು ತಿಂಗಳೋಲೆ

ಸಂಪುಟ - 42 ಅಗಸ್ಟ್- 2024 ಸಂಚಿಕೆ-8

# ಹೊಸದಿನದ ಆರಂಭ ಭಗವಂತನ ಸ್ಮರಣೆಯೊಂದಿಗೆ



✍ **ಡಾ. ಜ್ಯೋತಿ ಸತೀಶ್**

ನಮಗೆ ಪ್ರತಿದಿನವೂ ಹೊಸದೇ. ನಾವು ನಮ್ಮ ದಿನಚರಿಯನ್ನು ಶುರುಮಾಡುವ ಮೊದಲೇ ಈ ಹೊಸ ದಿನವನ್ನು ದಯಪಾಲಿಸಿದ್ದಕ್ಕೆ ಆ ಭಗವಂತನಿಗೆ ಕೃತಜ್ಞತೆಯನ್ನು ಸಲ್ಲಿಸಲೇಬೇಕು. ನಾವು ನಿನ್ನೆ ಮಾಡಿದ ತಪ್ಪುಗಳು ಇಂದು ಮರುಕಳಿಸದಂತೆ ನೋಡಿಕೊಳ್ಳಬೇಕು. ನಿನ್ನೆ ಆದ ತಪ್ಪುಗಳಿಗೆ ಇಂದು ಚಿಂತಿಸುತ್ತಾ, ಇವತ್ತಿನ ಈ ಹೊಸದಿನವನ್ನು ಹಾಳುಮಾಡಿಕೊಳ್ಳಬಾರದು. ಅದೇ ದೇಹ, ಅದೇ ಆತ್ಮವಿರಬಹುದು. ಆದರೆ ಹೊಸ ಉತ್ಸಾಹ, ಹುಮ್ಮಸ್ಸನ್ನು ನಾವು ತುಂಬುತ್ತಾ ಹೋದರೆ, ನಮ್ಮ ದಿನ ಒಳ್ಳೆದಾಗುತ್ತದೆ. ನಾವು ಮಾಡುವ ದಿನದ ಪ್ರತಿಯೊಂದು ಕಾರ್ಯದಲ್ಲೂ ಭಗವಂತನ ಸ್ಮರಣೆ ಇರಲೇಬೇಕು. ಈ ಸಂದರ್ಭದಲ್ಲಿ ನನಗೆ ಒಂದು ಜಾನಪದದ ಹಾಡು ನೆನಪಾಗುತ್ತದೆ.

"ಬೆಳಗಾಗಿ ನಾನೆದ್ದು ಯಾರ್ ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಲೆಯೋಳ। ಭೂಮ್ತಾಯ
ಎದ್ದೊಂದು ಘಳಿಗೆ ನೆನೆದೇನೋ"

ಎಷ್ಟೊಂದು ಸುಂದರವಾಗಿ, ಮಾರ್ಮಿಕವಾಗಿ ಈ ಜಾನಪದವನ್ನು ಕಟ್ಟಿಕೊಟ್ಟಿದ್ದಾರೆ ನೋಡಿ ನಮ್ಮ ಹಿರಿಯರು. ಪ್ರತಿದಿನದ ಬೆಳಗನ್ನು ಯಾವ ರೀತಿಯಲ್ಲಿ ಸ್ವಾಗತಿಸುತ್ತಿದ್ದಾರೆ ನೋಡಿ. ಕೃಷಿಯನ್ನೇ ತಮ್ಮ ಜೀವನವನ್ನಾಗಿ ಮಾಡಿಕೊಂಡಿರುವ ಒಂದು ಹೆಣ್ಣು ಮಗಳ ಚಿಂತನೆ ಯಾವ ಮಟ್ಟದ್ದು ನೋಡಿ. ಇಂದು ವಿಜ್ಞಾನ, ತಂತ್ರಜ್ಞಾನದಲ್ಲಿ ಜಗತ್ತು ಎಷ್ಟೇ ಸಾಧಿಸಿದರೂ, ಹಸಿವು ನೀಗಿಸಲು ಅನ್ನವೇ ಬೇಕು. ಅದನ್ನು ನೀಡುವ ಈ ಭಾಮ್ತಾಯಿಯನ್ನು ನಾವು ಸ್ಮರಿಸಲೇಬೇಕು. ಎಷ್ಟೇ ಹಣವಿದ್ದರೂ ಅದನ್ನು ತಿನ್ನಲಿಕ್ಕೆ ಆಗುವುದಿಲ್ಲ. ಆಹಾರವೇ ಬೇಕು ಅಲ್ಲವೇ. ಇದೇ ಒಂದು ಚಿಕ್ಕ ಹೊಟ್ಟೆಯನ್ನು ತುಂಬಿಸಲು, ಜೀವನ ಪರ್ಯಂತ ಎಷ್ಟೆಲ್ಲ ಪಾಡನ್ನು ಪಡುತ್ತೇವೆ. ನಮ್ಮ ಹಿರಿಯರು ಎಷ್ಟೊಂದು ಆರಾಮವಾಗಿ ಜೀವನವನ್ನು ಕಳೆದರು. ಅವರನ್ನು ನೋಡಿ ನಾವು ಕಲಿಯಬೇಕಾದದ್ದು ಬಹಳಷ್ಟಿದೆ.

ಕಷ್ಟಗಳಿಗೆ ಹೆದರಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ನಮ್ಮ ಯುವಪೀಳಿಗೆಗೆ ನಮ್ಮ ಹಿಂದಿನವರ ಬದುಕು ಆದರ್ಶವಾಗಬೇಕು. ಕಷ್ಟಗಳನ್ನು ನೀಗಿಕೊಂಡು, ಬಾಗಿಸೋದು, ಮಾಗಿಸೋದನ್ನು ಎಷ್ಟೊಂದು ಚತುರತೆಯಿಂದ ಮಾಡಿದರು ನಮ್ಮ ಹಿಂದಿನವರು. ಅವರು ತಮ್ಮ ಮಕ್ಕಳಿಗೆ ಇಷ್ಟು ಆಸ್ತಿ ಮಾಡಿಡಬೇಕು ಅಷ್ಟು ಆಸ್ತಿ ಮಾಡಿಡಬೇಕು ಎಂಬ ಕಲ್ಪನೆಯನ್ನು ಮಾಡಿಕೊಂಡವರಲ್ಲ. ವಿದ್ಯೆ, ಸಂಸ್ಕಾರಗಳೇ ಅವರ ಆಸ್ತಿಯಾಗಬೇಕು ಎಂಬುದನ್ನು ಹಂಬಲಿಸಿದರು. ದೇವರು ಕೊಟ್ಟ ಬಾಳನ್ನು ಬಯ್ಯದೆ, ಇದ್ದದ್ದರಲ್ಲೇ ಸಂತೋಷವನ್ನು ಕಂಡುಕೊಂಡರು. ಏನೂ ಇಲ್ಲದೆ ಎಲ್ಲವೂ ಇದೆ ಅಂತ ಅಂದುಕೊಂಡು, ಬದುಕನ್ನು ಕಟ್ಟಿಕೊಳ್ಳೋದು ಮುಖ್ಯ ಎನ್ನುವುದನ್ನು ನಮ್ಮ ಹಿಂದಿನವರು ನಮಗೆ ಹೇಳಿಕೊಟ್ಟರು. ಇದೇ ಬದುಕಿನ ಸಂಭ್ರಮ, ಬದುಕಿನ ಯಶಸ್ಸಿನ ಮಹದಾನಂದ. ಇದನ್ನೆಲ್ಲ ನಮ್ಮ ಹಿಂದಿನವರಿಂದ ಕಲಿಯಬೇಕು. ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವು ನಡೆದರೆ, ಬಹುಶಃ ಯಾವ ಕುಟುಂಬವೂ ದುಃಖಿಯಾಗಿರದೆ, ಸುಖಿಯಾಗಿ ಸಂಸಾರವನ್ನು ನಡೆಸಬಹುದು. ಎಲ್ಲವೂ ಉತ್ಪತ್ತಿಯಾಗುವುದು ನಮ್ಮ ಮಾಯಕದ ಮನಸ್ಸಿನಲ್ಲಿ. ಆ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವ ಕಲೆ ಎಲ್ಲರಿಗೂ ಕರಗತವಾಗುವುದು ಕಷ್ಟ. ಮನಸ್ಸು ಕಣ್ಣು ನೋಡಿದ್ದನ್ನೆಲ್ಲ ಬಯಸುತ್ತದೆ. ಆದರೆ ನಮ್ಮ ಒಳ ಹೃದಯ ನಿಧಾನವಾಗಿ ತಡೆಯಲು ಪ್ರಯತ್ನಿಸುತ್ತದೆ. 'ಹಾಸಿಗೆ ಇದ್ದಷ್ಟೆ ಕಾಲು ಚಾಚು' ಎಂದು. ಆದರೆ ಮನಸ್ಸು ಹೃದಯದ ಮೇಲೆ ಹಾವಿಯಾಗಿ, ಅದನ್ನು ಅಲ್ಲೇ ಮಲಗಿಸುತ್ತದೆ. ನಮ್ಮಲ್ಲಿ ಆಸೆ, ದುರಾಸೆಗಳು ಹುಟ್ಟುಕೊಳ್ಳುಲು ಪ್ರೇರೇಪಿಸುತ್ತದೆ. ಅದಕ್ಕೆ ನಮ್ಮ ನಮ್ಮ ಮನಸ್ಸನ್ನು ನಾವು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಕಲಿಯಬೇಕು. ಆಗ ಬದುಕು ಸುಗಮವಾಗುತ್ತದೆ.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

# ದೇವ ನಾಮ ಸ್ಮರಣೆ

ಶ್ರೀ ಸಚ್ಚಿದಾನಂದ ಸರಸ್ವತಿಗಳು

ನಮ್ಮ ನಾಡಿನ ಮಹರ್ಷಿಗಳು ನೀಡಿದ ಉಪದೇಶದಲ್ಲಿ ಇರುವ ಒಂದು ಹೆಚ್ಚುಗಾರಿಕೆ ಏನೆಂದರೆ, ಅತ್ಯಂತ ಗಹನವಾದ ತತ್ವರಹಸ್ಯವನ್ನು ಸಾಮಾನ್ಯರಿಗೂ ನಿಲುಕುವಂತೆ ಮಾಡಿರುವುದು. ಅವರ ಉಪದೇಶಗಳು ವ್ಯಾಪಾರಕ್ಕಾಗಿ ಹೊಲೆದಿಟ್ಟಿರುವ ಒಂದೇ ಅಳತೆಯ ಅಂಗಿಗಳಂತೆ ಇರದೆ, ಅವರವರಿಗೆ ತಕ್ಕಂತೆಯೂ, ಪೂರ್ಣ ಪ್ರಯೋಜನವೂ ಆಗುವಂತೆ ಹೊಂದಿಸಿ ಮಾಡಿರುವ ಬೋಧನೆಯು ಅವರಿಗೆ ಮೀಸಲಾಗಿರುತ್ತವೆ. ಉದಾಹರಣೆಗಾಗಿ ಸಾಮಾನ್ಯರಿಗೂ ಸುಲಭವಾಗಿ ತಿಳಿಯುವಂತೆಯೂ, ಅನುಷ್ಠಾನ ಮಾಡಿದರೆ ವೈದಿಕ ಧರ್ಮದ ಪರಮ ಪ್ರಯೋಜನವೂ ಪೂರ್ಣವಾಗಿ ದೊರೆಯುವಂತೆಯೂ ಆ ಮಹಾತ್ಮರು ದೇವನಾಮ ಸ್ಮರಣೆಯ ಉಪದೇಶವನ್ನು ಕುರಿತು ಸ್ವಲ್ಪ ವಿಮರ್ಶೆ ಮಾಡೋಣ.

ವೇದದ ಸಿದ್ಧಾಂತವೇನು? ಸಚ್ಚಿದಾನಂದ ಸ್ವರೂಪವಾದ ಏಕರಸವಾದ ಬ್ರಹ್ಮ ಒಂದೇ ಪರಮಾರ್ಥವು ಅದರಲ್ಲಿ ಯಾವ ಬೇಧವಾಗಲಿ, ವಿಭಾಗವಾಗಲಿ ಒಂದಿಷ್ಟೂ ಇರುವುದಿಲ್ಲ. ಹೀಗೆಂದು ಉಪನಿಷತ್ತುಗಳು ಸಾರುತ್ತವೆ. ಮಹಾತ್ಮರು ಇದನ್ನು ತಮ್ಮ ಅನುಭವದಿಂದ ಕಂಡುಕೊಂಡು ಆನಂದಿಸಲೂ ಇರುತ್ತಾರೆ. ಆದರೆ ಈ ಸಿದ್ಧಾಂತವು ಸಾಧಾರಣವಾದ ನಮ್ಮಂತಹವರಿಗೆ ಹಿಡಿಸುವುದಿಲ್ಲ. ದೊಡ್ಡದಾದ ಆನೆಯೊಂದನ್ನು ನಮ್ಮ ಗುಡಿಸಲಿಗೆ ತಂದುಕೊಂಡೆಂದು ಕಾಡುವ ಬಡವರ ಮಗುವನ್ನು ಸಮಾಧಾನ ಪಡಿಸುವುದಕ್ಕೆಂದು ತಂದೆತಾಯಿಗಳು ಏನಾದರೊಂದು ಉಪಾಯ ಮಾಡಬೇಕೆಂದು ಎಷ್ಟು ಹೆಣಗಿದರೂ ಆಗುವುದಿಲ್ಲ. ದೊಡ್ಡ ಆನೆಯು ಸಣ್ಣ ಗುಡಿಸಲಿನೊಳಗೆ ಎಂದೂ ಹಿಡಿಸಲಾರದು. ಆದರೂ ಮುದ್ದು ಮಗನ ಪ್ರೇಮದಿಂದ ಮನೆಯೊಳಗೆ ಒಂದು ಕನ್ನಡಿಯನ್ನು ಇಟ್ಟರೆ ಆ ದೊಡ್ಡ ಆನೆಯ ಪ್ರತಿಬಿಂಬವೂ ಗುಡಿಸಿಲಿನೊಳಗೆ ಕಾಣಿಸಿಕೊಳ್ಳಬಹುದು. ಈ ಬಡವರ ಮನೆಯ ಮಗುವಿಗೂ ಆನೆಯನ್ನು ಕಂಡರೆ ಆಗುವ ಮನಸ್ಸಂತೋಷ ಎಷ್ಟಿರಬಹುದು ಅಲ್ಲವೇ? ಇದರಂತೆ ಪರತತ್ವವನ್ನು ನೇರವಾಗಿ ಕಂಡ ಋಷಿಗಳು, ನಮ್ಮಂತಹವರಿಗೂ ಆ ತತ್ವವು ನಿಲುಕುವಂತೆ ಮನಸ್ಸನ್ನು ಸ್ವಚ್ಛಗೊಳಿಸುವ ಸಾಧನಗಳನ್ನು ಉಪ ದೇಶಿಸಿರುತ್ತಾರೆ. ನಾವು ಆ ಸಾಧನಗಳನ್ನು ಅಳವಡಿಸಿಕೊಂಡರೆ, ನಮ್ಮ ಸಣ್ಣ ಮನಸ್ಸಿನಲ್ಲಿಯೂ ಅದೇ ಪರಮಾರ್ಥ ಮೂಡಿಕೊಳ್ಳಬಹುದಾಗಿರುತ್ತದೆ. ಋಷಿಗಳು ಪರತತ್ವದ ಜ್ಞಾನ ಉಳ್ಳವರು. ವಿಚಾರ ಸಮರ್ಥರಾದವರಿಗೆ ಅದೇ ಜ್ಞಾನವು ಸಿಕ್ಕಬಹುದಾದರೂ  ಬಹುಜನರಿಗೆ ಜ್ಞಾನವೂ ಅಷ್ಟು ಸುಲಭ ಸಾಧ್ಯವಾಗಿರುವುದು. ವಿದೇಶವನ್ನು ನೋಡಿರುವವರು ಉತ್ತಮ ರೀತಿಯಿಂದ ಅದರ ವರ್ಣನೆಯನ್ನು ಮಾಡಿ, ನಮ್ಮ ಮನಸ್ಸಿನಲ್ಲಿ ಅದರ ಚಿತ್ರವನ್ನು ತಂದುಕೊಡುವಂತೆ ಕೆಲವು ಚಿತ್ರಗಳನ್ನು ಕಲ್ಪಿಸಿಕೊಟ್ಟು ಅವುಗಳನ್ನು ಲಕ್ಷ್ಯವಿಟ್ಟು ಸತತವಾಗಿ ಚಿಂತಿಸುತ್ತಿರುವಂತೆ  ಹೇಳಿಕೊಡುತ್ತಾರೆ. ಈ ಚಿಂತನೆಯೇ ಧ್ಯಾನ. ಸಾಧಕರು ಒಂದೇ ಸಮನೆ ಸಾಯುವವರೆಗೂ ಮಾಡಿದ ಧ್ಯಾನದಿಂದ ಬದುಕಿರುವಾಗಲೇ ತಾದಾತ್ಮ ಭಾವನೆಯನ್ನು ಮೈಗೂಡಿಸಿಕೊಂಡು, ದೇಹವನ್ನು ಬಿಟ್ಟ ಬಳಿಕ ಆ ತತ್ವದ ಸಾಯುಜ್ಯವನ್ನೇ ಹೊಂದುತ್ತಾರೆ. ಈ ಧ್ಯಾನವು, ಜ್ಞಾನಕ್ಕಿಂತ ಒಂದು ಮೆಟ್ಟಲು ಕೆಳಗಿನದಾಗಿರಬಹುದು. ಇರಲಿ.

ಆದರೆ ಇಷ್ಟೂ ಯಾರಿಗೆ ಶಕ್ಯವಿಲ್ಲವೋ ಅಂತಹವರಿಗೂ ಋಷಿಗಳು ಕರುಣೆಯಿಂದ ಕೆಲವು ಸಾಧನೆಗಳನ್ನು ಏರ್ಪಡಿಸುರುತ್ತಾರೆ. ಅಂತಹವುಗಳಲ್ಲಿ ನಾಮ ಸ್ಮರಣೆಯೂ ಒಂದಾಗಿರುತ್ತದೆ. ವೇದಗಳಲ್ಲಿ ಓಂಕಾರ, ಆಕಾಶ, ಮನಸ್ಸು, ಸೂರ್ಯ ಮುಂತಾದವುಗಳನ್ನೇ ಬ್ರಹ್ಮವೆಂದು ಉಪಾಸನ ಮಾಡಬೇಕೆಂದು ಹೇಳುವುದೂ ಈ ಅಂತಸ್ತಿಗೆ ಸೇರತಕ್ಕ ಸಾಧನವಾಗಿರುತ್ತದೆ. ನಾಮ- ನಾಮಿಗಳಿಗೆ ಇರುವ ನಿಕಟ ಸಂಬಂಧವು ನಮಗೆ ವ್ಯವಹಾರದಲ್ಲಿ ಚೆನ್ನಾಗಿ ಗೊತ್ತಿರುತ್ತದೆ. ಯಾವ ವಸ್ತುವಾದರೂ ವ್ಯವಹಾರದಲ್ಲಿ ಬಳಕೆಗೆ ಬರಬೇಕಾದರೆ ಅದಕ್ಕೆ, ಹೆಸರು ಕೊಟ್ಟದ್ದಲ್ಲದೆ ಆಗಲಾರದು. ನಾಮದ ವಶದಲ್ಲಿಯೇ ನಾಮಿ ಇರುವುದು. ಆದ್ದರಿಂದ ನಾಮವನ್ನೇ ಬ್ರಹ್ಮವೆಂದು ಉಪಾಸನೆ ಮಾಡಬೇಕೆಂದು ದೊಡ್ಡವರು ಉಪದೇಶಿಸಿರುತ್ತಾರೆ.

ಇಲ್ಲೊಂದು ಶಂಕೆ. ಹೆಚ್ಚಿನ ಸಾಧನೆಗಳಿರುವ ಉಪಾಸನೆಗಳಲ್ಲಿರುವ ಫಲವು ಕೇವಲ ಸಣ್ಣ ನಾಮಸ್ಮರಣೆಯಂತಹ ಸಾಧನಕ್ಕೆ ಹೇಗೆ ಸಿಗಬಹುದು ಎಂದು ನಮ್ಮಗಳಲ್ಲೇ ಕೊರಗು ತೋರುತ್ತದೆ. ಆದರೆ ವೇದಾಂತದ ಉಪದೇಶದ ತಿರುಳೇನು? ಯಾವುದೊಂದು ಪದಾರ್ಥವೇ ಆಗಲಿ, ಯಾವುದೊಂದು ಹೆಸರೇ

ಆಗಲಿ, ಪರಮಾತ್ಮನ ಸ್ವರೂಪದ ರೂಪರೇಷೆಯೇ ಆಗಿರುತ್ತದೆ. ನಾಮ ಪ್ರಪಂಚವೆಲ್ಲಾ ಓಂಕಾರದ ಕಾರ್ಯವೆಂದೂ ಪ್ರಪಂಚವೆಲ್ಲಾ ಆತ್ಮನೇ ಎಂದೂ, ಓಂಕಾರ-ಪರಮಾತ್ಮ ಒಂದೇ ಎಂದೂ ಹೇಳಿರುವ ಮಾಂಡೂಕ್ಯ ಉಪನಿಷತ್ತಿನ ವಚನವನ್ನು ನಾವು ಇಲ್ಲಿಗೆ ನೆನಪು ಮಾಡಿಕೊಳ್ಳಬೇಕು. ಹೀಗೆ ಎಲ್ಲವೂ ಪರಮಾತ್ಮನೇ ಪರಬ್ರಹ್ಮನೇ ಆದರೆ ಲೋಕದಲ್ಲಿ ಕಾಣುತ್ತಿರುವ ಪದಾರ್ಥಗಳ ತಾರತಮ್ಯಗಳಿಗೂ ಪದಗಳ ಶಕ್ತಿ ತಾರತಮ್ಯಕ್ಕೂ ಗತಿಯೇನು? ಎಂದು ಯಾರಾದರೂ ಕೇಳಬಹುದು. ಈ ತಾರತಮ್ಯ ನಮ್ಮ ಇಂದ್ರಿಯಗಳ ಕಲ್ಪನೆಯೇ ಹೊರತು ಪರಮಾರ್ಥವಲ್ಲ. ಒಂದು ಕಂಬವನ್ನು ಮನಸ್ಸಿಗೆ ತಂದಾಗ ಅದರ ಸ್ಮರಣೆಯು ನಮ್ಮ ಮನಸ್ಸಿನಲ್ಲಿರುವುದಿಲ್ಲ. ಸ್ಮರಣೆಯು ನಮಗಿರುವಾಗ ಕಂಬವನ್ನು ನಾವು ನೋಡುತ್ತಿರುವುದಿಲ್ಲ. ಹೀಗೆ ಒಂದಾಗುತ್ತಲೊಂದು ವಿಷಯವನ್ನು ಮನಸ್ಸು ಕಾಣುತ್ತಿದ್ದರೂ, ಒಂದೇ ಕಾಲದಲ್ಲಿ ಎಲ್ಲಾ ವಸ್ತುಗಳನ್ನೂ ಎಲ್ಲಾ ಘಟನೆಗಳನ್ನೂ ತನಗೆ ವಿಷಯವಾಗಿ ಕಲ್ಪಿಸಿಕೊಳ್ಳುವ ಶಕ್ತಿಯೊಂದು ಮನಸ್ಸಿಗೆ ಇರುತ್ತದೆ. ಈ ಮನಸ್ಸಿನ ಸ್ವಭಾವವನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡು ವಿಮರ್ಶೆ ಮಾಡಿದವರಿಗೆ ಒಂದು ತತ್ವ ಮಿಂಚುತ್ತದೆ.

ಅದೇನೆಂದರೆ ಆ ಪರಬ್ರಹ್ಮ ಶಕ್ತಿ ಬೇರೆ ಬೇರೆ ಜನರಿಗೆ ಬೇರೆ ಬೇರೆ ದೃಷ್ಟಿಯಿಂದ ಬೇರೆ ಬೇರೆ ಬಗೆಗಳಾಗಿ ಕಾಣಿಸುತ್ತಿದ್ದರೂ, ನಿಜವಾಗಿ ಅದು ಬೇರೆಯಾಗಿರುವುದಿಲ್ಲ. ಇರುವ ಒಂದೇ ಬ್ರಹ್ಮವನ್ನು ನಾವು ಬಗೆ ಬಗೆಯಾಗಿ ಕಂಡರೂ ಅದು ಒಂದೇ ಆಗಿರುತ್ತದೆ. ಅದು ಪ್ರಾಣಿಯಾಗಲಿ, ಪದಾರ್ಥವಾಗಿ ಕಂಡರೂ ಅದು ಕೇವಲ ಪರಬ್ರಹ್ಮಶಕ್ತಿಯಾಗಿರುತ್ತದೆ. ಅವುಗಳ ನಾಮಗಳೂ ಬೇರೆ ಬೇರೆಯಾಗಿ ಕಂಡರೂ ಒಂದೇ ಆಗಿರುತ್ತದೆ. ಈ ದೃಷ್ಟಿಯಿಂದ ನಾಮವೂ ಪರಬ್ರಹ್ಮವೇ ಆಗಿರುತ್ತದೆ. ಆದ್ದರಿಂದ ನಾಮ ಸ್ಮರಣೆಯಿಂದಲೂ ಪರಮ ಫಲವೇ ಸಿಕ್ಕುವುದೆಂದು ಋಷಿಗಳು ಹೇಳಿರುವುದು ದಿಟ.

ನಾಮಸ್ಮರಣೆಗಳಲ್ಲಿ ಓಂಕಾರವೇ ಅತಿ ಹೆಚ್ಚಿನ ನಾಮವೆಂದು ಉಪನಿಷತ್ತುಗಳು ಹೇಳಿದ್ದರೂ ಅದು ಪರಮ ವಿರಕ್ತರಿಗೆ ದಕ್ಕುವುದು ಸುಲಭ, ನಮ್ಮಂತಹ ಸಾಮಾನ್ಯರಿಗೆ ಶಿವ-ರಾಮ-ಕೃಷ್ಣಾದಿ ನಾಮಗಳೇ ಸುಲಭವಾಗಿ ತಿಳಿಯುವಂತವು.

ನಾಮವೆಂಬುದು ಹತ್ತು ಲಕ್ಷ ರೂಪಾಯಿನ ಚೆಕ್ಕಿನಂತೆ ಇರುತ್ತದೆ. ಚೆಕ್ಕು ಕೇವಲ ಕಾಗದವೆಂದು ತಿಳಿದವರಿಗೆ ಅದಕ್ಕೇನೂ ಬೆಲೆಯೇ ಇರುವುದಿಲ್ಲ. ಆದರೆ ಅದು ಚೆಕ್ಕು ಎಂಬ ಅರಿವು ಬಂದೊಡನೆಯೇ ಅದರ ಬೆಲೆ ಮಹತ್ವದ ಅರಿವಾಗುತ್ತದೆ. ಇದರಂತೆ "ರಾಮ" ಎಂಬ ಹೆಸರು ಒಬ್ಬ ಧರ್ಮಾತ್ಮನೂ, ಸತ್ಯಸಂಧನೂ, ವೀರನೂ, ದಯಾಕರನೂ ಆದ ವಿಷ್ಣುವೇ ಲೋಕ ಕಲ್ಯಾಣಕ್ಕಾಗಿ ಅವತರಿಸಿದ, ಪರಬ್ರಹ್ಮನೇ ಎಂದು ನಾವು ಹಿಗ್ಗಿಸಿ ಹಿಗ್ಗಿಸಿ ಅದರ ಅರ್ಥವನ್ನು ಅರಿತುಕೊಂಡಂತೆಲ್ಲಾ ಅದರ ಹೆಚ್ಚುಗಾರಿಕೆಯು ನಮ್ಮ ಮನಸ್ಸಿಗೆ ಹೆಚ್ಚು ಹೆಚ್ಚಾಗಿ ತಟ್ಟಾಗಿ ಬರುತ್ತದೆ. ಇಂಥಾ ಬೆಲೆಯು ನಮ್ಮ ಹೃದಯದಲ್ಲಿ ನೆಟ್ಟುಕೊಂಡು ತೋರಬೇಕಾದರೆ ನಾಮವು ಮಂತ್ರರೂಪದಿಂದ ಸದ್ಗುರುಗಳ ಉಪದೇಶರೂಪವಾಗಿ ಬರಬೇಕು. ಆಗಲೇ ನಾವು "ನಾಮಸ್ಮರಣೆ' ಯ ಅಧಿಕಾರವನ್ನು ಪಡೆದಂತಾಗುವುದು.

ಯಾವ ಪುಣ್ಯಾತ್ಮನಿಗೆ ಉಪವಿಷ್ಟ ನಾಮದ ಬಲವು ಮೈಯೆಲ್ಲಾ ರಕ್ತಗತವಾಗಿ ಮನಸ್ಸೆಲ್ಲಾ ಮಂತ್ರಮಾಯವಾಗುವುದೂ ಅಂತಹವನಿಗೆ ನಾಮನೇ ಬ್ರಹ್ಮವೆಂಬ ಅರಿವಾಗುತ್ತದೆ. ಅಂತಹ ಮಹನೀಯನು ತನ್ನ ಶರೀರ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ ಎಂಬ ಯಾವ ತಾರತಮ್ಯವನ್ನೂ ಕಾಣದೆ ಎಲ್ಲವನ್ನೂ "ದೇವ ನಾಮ' ವಾಗಿಯೇ ಕಾಣುತ್ತಿರುವನು. ಅವನು ಕೂತಾಗ, ನಿಂತಾಗ, ಮಲಗಿದಾಗ ಅವನಿಗೆ ಸ್ಮರಣೆಯಾಗುವುದೇ ಈ ದೇವನಾಮ ಅವನ ಕನಸಿನಲ್ಲೂ ಈ ದೇವನಾಮವೇ ಕಾಣುತ್ತಿರುವುದು. ಗೋಡೆ ಗೋಡೆಗಳೂ ಈ ದೇವನಾಮವನ್ನು ಅವನಿಗೆ ಕೇಳಿಸುತ್ತವೆ.

ಹೀಗೆ ಪರಬ್ರಹ್ಮ ಸ್ವರೂಪವೇ ಆದ ದೇವನಾಮ ಅವನಿಗೆ ಸದಾ ದೊರಕಿರುತ್ತದೆ.

ನೀವೂ ಮಾಡಿ ನೋಡಿ ತನ್ಮಯರಾಗಿರಿ.

\- ಓಂ -

# ಏಕದಂತನ ವೇಗಕ್ಕೆ ಕಥೆ ಹೇಳಿದ ವ್ಯಾಸ

- **ಶುಭಶ್ರೀ ಭಟ್ಟ**

**"ನೋಡ್ರಿ, ಇವರು ನನ್ನ ಹೆಸರು ತೆಗೊಂಡು ಏನೇನೋ ಬರೀತಾರೆ"**

ಮಹಾಭಾರತ ಯುದ್ಧ ಮುಗಿದ ನಂತರ ವೇದವ್ಯಾಸರು ತಮ್ಮ ಅಗಾಧ ತಪಸ್ಸಿನ ಶಕ್ತಿಯ ಫಲದಿಂದ ಮೊಮ್ಮಕ್ಕಳ ಕಾಲಾನಂತರವೂ ಆರೋಗ್ಯವಂತರಾಗಿ ಹಿಮಾಲಯದ ತಪ್ಪಲಿನಲ್ಲಿ ವಾಸಿಸುತ್ತಿದ್ದರು. ಆ ಸಮಯದಲ್ಲಿ ಸೃಷ್ಟಿಕರ್ತ ಬ್ರಹ್ಮದೇವ ಮಹಾಭಾರತ ಯುದ್ಧದ ಕುರಿತು ಕೃತಿ ರಚಿಸಲು ಬಯಸಿದರು. ಈ ಶ್ರೇಷ್ಠ ಕೃತಿ ಬರೆಯಲು ಆ ಮಹಾಯುದ್ಧದ ಪ್ರತ್ಯಕ್ಷದರ್ಶಿ ಮತ್ತು ಅಲ್ಲಿಬರುವ ಪ್ರತಿ ಪಾತ್ರವನ್ನೂ ಹತ್ತಿರದಿಂದ ನೋಡಿರುವ ವೇದವ್ಯಾಸರಿಗಿಂತ ಶಕ್ತ ವ್ಯಕ್ತಿ ಇನ್ನೊಬ್ಬರಿಲ್ಲ ಎಂದು ಅರಿತ ಅವರು ವೇದವ್ಯಾಸರ ಎದುರು ಪ್ರತ್ಯಕ್ಷರಾಗಿ ಕೃತಿ ರಚಿಸಲು ಕೇಳಿದರು.



ಅದಕ್ಕೊಪ್ಪಿದ ವ್ಯಾಸರು ತನ್ನ ಸಹಾಯಕ್ಕೆ ಲಿಪಿಕಾರನ ಅಗತ್ಯವಿದೆ ಎಂದು ಹೇಳಿದರು. ಅದಕ್ಕೆ ಬ್ರಹ್ಮದೇವ ಈ ಕೆಲಸಕ್ಕೆ ಪ್ರಥಮ ಪೂಜಿತ ಗಣಪತಿಯೇ ಯೋಗ್ಯನೆಂದು ತಿಳಿಸಿದರು. ಆಗ ವ್ಯಾಸರು ತಮ್ಮ ಕೃತಿ ರಚನೆಯ ಕೆಲಸಕ್ಕೆ ನೆರವಾಗುವಂತೆ ಗಣಪತಿಯನ್ನು ಕೋರಿ ಮತ್ತೆ ತಪಸ್ಸಿಗೆ ಕುಳಿತರು. ಈ ತಪಸ್ಸಿಗೆ ಪ್ರಸನ್ನನಾದ ಗಣಪತಿ ವ್ಯಾಸರೆದುರು ಸಾಕ್ಷಾತ್ಕಾರಗೊಂಡು ತಪಸ್ಸಿನ ಕಾರಣ ಕೇಳಿದನು.

ಆಗ ವ್ಯಾಸರು ಬ್ರಹ್ಮದೇವರಿಂದ ನಿವೇದನೆಗೊಳಗಾದ ಕಾರ್ಯವನ್ನು ತಿಳಿಸಿ ಅದಕ್ಕೆ ಸಹಾಯ ಮಾಡುವಂತೆ ಕೋರಿದರು. ಇಂತಹ ಅದ್ಭುತ ಕೃತಿ ರಚಿಸುವ ಶಕ್ತಿ ವೇದವ್ಯಾಸರಿಗಿದೆ ಎಂದು ಗಣಪತಿಗೆ ತಿಳಿದಿದ್ದರೂ ಅವರನ್ನು ಪರೀಕ್ಷಿಸುವ ಸಲುವಾಗಿ ಆತ ಒಂದು ಷರತ್ತು ವಿಧಿಸಿ, ವ್ಯಾಸರು ಯಾವುದೇ ಕಾರಣಕ್ಕೂ ಕಥೆ ಹೇಳುವುದನ್ನು ಮಧ್ಯದಲ್ಲಿ ನಿಲ್ಲಿಸಬಾರದು. ಹಾಗೇನಾದರು ಮಾಡಿದರೆ ನಾನು ಆ ಕ್ಷಣವೇ ಬರೆಯುವುದನ್ನು ನಿಲ್ಲಿಸಿ ಮರಳುತ್ತೇನೆ ಮತ್ತು ನಾನೂ ಯಾವುದೇ ಕಾರಣಕ್ಕೂ ಬರೆಯುವುದನ್ನು ನಿಲ್ಲಿಸುವುದಿಲ್ಲವೆಂದು ಹೇಳಿದನು.

ವ್ಯಾಸರಿಗೆ ತಮ್ಮ ಶಕ್ತಿಯ ಅರಿವಿದ್ದರೂ ಗಣಪತಿಯ ವೇಗಕ್ಕೆ ಕಥೆ ಹೇಳಲು ಸಾಧ್ಯನಾ ಎಂಬ ಸಂಶಯ ಮೂಡಿ ಅದಕ್ಕೊಂದು ಉಪಾಯ ಹೂಡುತ್ತಾರೆ. ಅದರಂತೆ ಅವರು ಗಣಪತಿಗೆ, ನಾನು ಹೇಳುವ ಕಥೆಯನ್ನು ಅರ್ಥ ಮಾಡಿಕೊಳ್ಳದೇ ನೀನು ಬರೆಯುವಂತಿಲ್ಲ' ಎಂದಾಗ ಆತ ಅದಕ್ಕೆ ಒಪ್ಪಿದನು. ಅದರಂತೆ ಒಂದು ಶುಭ ಮುಹೂರ್ತದಲ್ಲಿ ಮಹಾಭಾರತದ ಕೃತಿ ರಚಿಸಲು ಕುಳಿತ ಲಿಪಿಕಾರ ಗಣಪತಿಗೆ ವಂದಿಸಿ ವ್ಯಾಸರು ಕಥೆ ಹೇಳಲು ಶುರು ಮಾಡಿದನು.

ಅವರು ಹೇಳಿದ್ದನ್ನೆಲ್ಲ ಶ್ರದ್ಧೆಯಿಂದ ಕೇಳಿಸಿಕೊಂಡು ಗಣಪತಿ ಬರೆಯತೊಡಗಿದನು. ವ್ಯಾಸರು ತಮ್ಮ ಉಪಾಯದಂತೆ ತಮಗೆ ಕ್ಷಣಿಕ ವಿಶ್ರಾಂತಿ ಬೇಕೆನಿಸಿದಾಗ ಕ್ಲಿಷ್ಟಕರವಾಗಿರುವ ಮತ್ತು ಯೋಚನೆಗೆ ಒರೆ ಹಚ್ಚುವಂತಹ ವಾಕ್ಯಗಳನ್ನು ಹೇಳಿ ಅದನ್ನು ಗಣಪತಿ ಅರ್ಥೈಸಿಕೊಳ್ಳಲು ತೆಗೆದುಕೊಳ್ಳುವ ಸಮಯದಲ್ಲಿ ವಿಶ್ರಾಂತಿ ಪಡೆದು ಮತ್ತೆ ಕಥೆ ಹೇಳುವುದನ್ನು ಮುಂದುವರೆಸಿದರು. ಕೃತಿ ರಚಿಸುವ ಸಮಯದಲ್ಲೊಮ್ಮೆ ಗಣಪತಿಯ ಲೇಖನಿ ತುಂಡಾಗುತ್ತದೆ. ಆಗ ಬರವಣಿಗೆಯನ್ನು ನಿಲ್ಲಿಸುವುದಿಲ್ಲ ಎಂಬ ಮಾತಿನಂತೆ ನಡೆದುಕೊಳ್ಳುವ ಸಲುವಾಗಿ ಗಣಪತಿ ತನ್ನ ದಂತವನ್ನೇ ಮುರಿದು ಕೃತಿ ರಚನೆಯನ್ನು ಮುಂದುವರೆಸಿದನು. ಹೀಗೆ ವರ್ಷಗಟ್ಟಲೇ ವ್ಯಾಸರು ಕಥೆ ಹೇಳುವುದು ಮತ್ತು ಗಣಪತಿ ಬರೆಯುವುದು ಮುಂದುವರೆದು ಶ್ರೇಷ್ಠ ಕೃತಿಯೊಂದು ರಚನೆಯಾಗುತ್ತದೆ.

ಮೊದಲು ಗಣಪತಿಗೆ ಒಂದು ಹಲ್ಲು ಚಂದ್ರನನ್ನ ಮುರಿಯಲು ಹೋಗಿತ್ತು. ಈಗ ಈ ವ್ಯಾಸ ಮಹಾರಾಯನ ಗಲಾಟೆ ಯಲ್ಲಿ ಇನ್ನೊಂದು ಹಲ್ಲೂ ಮುರಿಯಿತು.

# ಪ್ರವಾಸದ ಅನುಭವ ಕಥನ



✍ **ಡಾ| ಸುಮಾ ದ್ವಾರಕಾನಾಥ್**

ಅಮೃತಸರದಿಂದ ಜಮ್ಮುತಾವಿ ರೈಲು ಹಿಡಿದು ಕಾಶ್ಮೀರ ಪ್ರವಾಸಕ್ಕೆ ಮುಂದುವರೆದೆವು. ದಾರಿಯುದ್ದಕ್ಕೂ ಸೇಬಿನ ತೋಟ, ಪೀಚು ಕಾಯಿಗಳನ್ನು ನೋಡೇ ಸಂಭ್ರಮ. ಸೇಬು ಇವತ್ತು ಎಲ್ಲೆಲ್ಲೂ ಕಾಣುವ ಹಣ್ಣಾಗಿರಬಹುದು . ಆದರೆ ಆಗ ಅಪರೂಪದ ಶ್ರೀಮಂತರ ಹಣ್ಣಾಗಿತ್ತು. ಹೀಗೇ ಪತ್ನಿಟಾಪ್ ಮುಂತಾದ ಊರುಗಳನ್ನೆಲ್ಲಾ ಬಸ್ಸಿನ ಕಿಟಕಿಯಿಂದಲೇ ನೋಡುತ್ತಾ ರಾತ್ರಿ ಹೊತ್ತಿಗೆ ಶ್ರೀನಗರ ತಲುಪಿದೆವು. ಬೆಳಗ್ಗೆ ಕಾಶ್ಮೀರದ ಪ್ರೇಕ್ಷಣೀಯ ಸ್ಥಳಗಳಾದ ನಿಷಾದ್‌ಬಾಗ್, ಶಾಲಿಮಾರ್ ಗಾರ್ಡನ್ಸ್, ದಲ್‌ಲೇಕ್ ನೋಡಲು ಹೋದೆವು. ಲಾಲ್‌ಬಾಗ್, ಕಬ್ಬನ್ ಪಾರ್ಕ್ ನೋಡಿದವರಿಗೆ ಗಾರ್ಡನ್‌ಗಳು ಪೆಚ್ಚೆನಿಸಿದವು. ಆದರೆ ದಲ್‌ಲೇಕ್‌ನ ಶಿಕಾರದಲ್ಲಿನ ಪಯಣ ತುಂಬಾ ಉಲ್ಲಾಸಮಯವಾಗಿತ್ತು. ನಡುನಡುವೆ ನೀರಿನಲ್ಲೇ ತೇಲಿ ಬರುವ, ಒಣಹುಲ್ಲಿಗೆ ಕೇಸರಿ ಬಣ್ಣ ಹಚ್ಚಿ, ಅಪ್ಪಟ ಕೇಸರಿ ಎಂದು ಮಾರುವ ವ್ಯಾಪಾರಸ್ಥರ ಬಗ್ಗೆ ನಮಗೆ ಮೊದಲೇ ಎಚ್ಚರಿಕೆ ಕೊಟ್ಟಿದ್ದರಿಂದ ನಾವ್ಯಾರೂ ಅವರ ಬಲೆಗೆ ಬೀಳಲಿಲ್ಲ. ಅಲ್ಲಲ್ಲಿ ನಿಂತಿದ್ದ ಲಕ್ಷುರಿ ಹೌಸ್‌ಬೋಟ್‌ಗಳು ಸುಂದರವಾಗಿ ಅಲಂಕರಿಸಿಕೊಂಡು ನಿಂತಿದ್ದವು. ಕಾಶ್ಮೀರವನ್ನು ಭಾರತದ ಸ್ವಿಟ್ಜರ್ ಲ್ಯಾಂಡ್‌ಎಂದು ಕರೆಯುತ್ತಿದ್ದ ಕಾಲದಲ್ಲಿ , ಆತಂಕವಾದಿಗಳು ಧೂಳೀಪಟ ಮಾಡುವ ಮುನ್ನ ಮಾಡಿದ ಪ್ರವಾಸ ಅವರ್ಣನೀಯ.

ಅಲ್ಲಿಯ ಶಿಖರ ಪ್ರಾಯವಾದ ಗುಲ್ಮಾರ್ಗ್ ಮೇಲೆ ಹಿಮವನ್ನು ನೋಡಲು ನಾವೆಲ್ಲ ಉತ್ಸುಕರಾಗಿದ್ದೆವು. ಸುಮಾರು ೪೯ ಮೈಲಿ ದೂರದಲ್ಲಿರುವ ಬಾರಾಮುಲ್ಲಾ ಜಿಲ್ಲೆಗೆ ಸೇರಿದ್ದ ಗುಲ್ಮಾರ್ಗ್‌ಎಂದರೆ ಹೂವಿನ ಸಂತೆ ಎಂದೇ ಹೆಸರಾಗಿದ್ದ ಸಮುದ್ರದಿಂದ ೮೬೯೦ ಅಡಿ ಎತ್ತರದಲ್ಲಿದ್ದ ಬೆಟ್ಟಕ್ಕೆ ಮಾರನೆ ದಿನ ನಮ್ಮ ಪ್ರಯಾಣ. ಅದು ಹಿಮಾಲಯದ ಪಶ್ಚಿಮ ಘಟ್ಟದ ಪೀರ್‌ಪಂಜಾಲ್ ಎನ್ನುವ ವ್ಯಾಪ್ತಿಗೆ ಸೇರಿದ್ದು. ದಾರಿಯುದ್ದಕ್ಕೂ ಗಗನಚುಂಬಿ ವೃಕ್ಷಗಳು (ಪೈನ್, ಫರ್) ರಸ್ತೆಯ ಎರಡೂ ಪಕ್ಕದಲ್ಲಿ ಸಾಲುಗಟ್ಟಿರುವುದನ್ನು ನೋಡಿ, ಸಿನಿಮಾದಲ್ಲಷ್ಟೇ ನೋಡಿ ಸಂತೋಷಪಡುತ್ತಿದ್ದ ನಮಗೆ ಮಾತು ಮೂಕವಾಗಿತ್ತು. ಅಲ್ಲಲ್ಲೇ ಕಾಡಿನ ಪಕ್ಕದಲ್ಲಿದ್ದ ಬೋರ್ಡ್‌ಗಳು ನಮ್ಮನ್ನು ಇನ್ನೂ ಮೂಕವಾಗಿಸಿದ್ದವು. 'Silence, enjoy the forest music' ಇನ್ನೂ ಇಂಥದ್ದೇ ಒಳ್ಳೊಳ್ಳೆ ಸಂದೇಶಗಳು. ಅಂತೂ ಬೆಟ್ಟದ ಬುಡವನ್ನು ತಲುಪಿ, ಕುದುರೆ ಸವಾರಿಯ ಚೌಕಾಸಿ ಶುರುವಾಯಿತು. ನಮಗೆ ಎಡಬಲ ತಿಳಿಹೇಳಿ ಕುದುರೆಯ ಬಗ್ಗೆ ಸಂಭಾಳಿಸಲು ಸೂಚನೆ ದೊರೆತ ಮೇಲೆ, ನಮ್ಮ ಏರು ಪಯಣ ಒಬ್ಬೊಬ್ಬ ಕುದುರೆ ಆಳಿನೊಂದಿಗೆ ಮುಂದುವರೆಯಿತು. ಸುಮಾರು ೪ ಕಿ.ಮೀ. ಬೆಟ್ಟದ ದಾರಿ ಸಾಗಿದ ಮೇಲೆ ಒಂದು ದೊಡ್ಡ ಪ್ರಸ್ಥಭೂಮಿಗೆ ಬಂದೆವು. ಮೊಘಲರ ನಂತರ, ಬ್ರಿಟಿಷರು ಇದನ್ನು ಗೋಲ್ಫ್ ಮೈದಾನವನ್ನಾಗಿ ಬಳಸುತ್ತಿದ್ದರಂತೆ. ನಮ್ಮ ಕುತೂಹಲ ಇದ್ದದ್ದು ಹಿಮಾವೃತ ಪರ್ವತ. ಆದರೆ ನಮ್ಮ ಅದೃಷ್ಟಕ್ಕೆ ಅಲ್ಲಿ ಬರೀ ಕುರಿಗಳು ಮೇಯುತ್ತಿದ್ದ ಒಂದು ದೊಡ್ಡ ಮೈದಾನ. ಕುದುರೆ ಸವಾರಿಯೇ ಒಂದು ಸಂಭ್ರಮವಾಗಿ ಮತ್ತೆ ಕೆಳಗಿಳಿದು ಬಂದೆವು. ಅಲ್ಲಿಂದ ಪಹಲ್ ಗಾವ್ ನೋಡಿಕೊಂಡು ಶಂಕರಾಚಾರ್ಯರು ನಿರ್ಮಿಸಿದ್ದ ಕಾಶ್ಮೀರಪುರವಾಸಿನಿಯಾದ ಶಾರದಾ ಸರ್ವಜ್ಞ ಪೀಠಕ್ಕೆ ಬಂದೆವು. ಈ ಮಂದಿರಕ್ಕೆ ನಾಲ್ಕು ದಿಕ್ಕಿಗೂ ನಾಲ್ಕು ಬಾಗಿಲುಗಳಿವೆ. ಅದರ ಸುತ್ತಲೂ ಮೆಟ್ಟಿಲುಗಳು. ಅವುಗಳನ್ನು ಹತ್ತಿ ಹೋದರೆ, ಮೇಲೆ ಒಂದು ಸಿಂಹಾಸನವಿದೆ. ಅದರ ಮೇಲೆ ಕುಳಿತುಕೊಳ್ಳುವವರನ್ನು ಸರ್ವಜ್ಞರೆಂದು ಸನ್ಮಾನ ಮಾಡಲಾಗುತ್ತಿತ್ತು. ಹಾಗೆ ಸರ್ವಜ್ಞರಲ್ಲದವರು ಅಲ್ಲಿಗೆ ಹೋಗಲಾಗುತ್ತಿರಲಿಲ್ಲ. ಕಾರಣವೇನೆಂದರೆ, ಪ್ರತಿಯೊಂದು ಮೆಟ್ಟಿಲ ಮೇಲೂ ಬೇರೆ ಬೇರೆ ಮತಾನುಯಾಯಿಗಳಿದ್ದರು. ಅವರೆಲ್ಲರ ಪಂಥಗಳನ್ನು ಸರಿಯಾಗಿ ತಿಳಿದಿದ್ದರೆ ಮಾತ್ರ ಮೇಲೆ ಏರಿಹೋಗಬಹುದಿತ್ತು. ಎಷ್ಟೋ ಜನ ಬಂದು ಪರಾಜಿತರಾಗಿ ವಾಪಸ್ಸು ಹೋಗಿದ್ದರು. ಆ ಪೀಠದ ಪೂರ್ವ, ಪಶ್ಚಿಮ ಮತ್ತು ಉತ್ತರದ ಬಾಗಿಲುಗಳನ್ನು ಈ ಹಿಂದೆ ವಿವಿಧ ವಿದ್ವಾಂಸರು ತಮ್ಮ ಸರ್ವಜ್ಞತೆಯನ್ನು ತೋರಿ ಪೀಠಾರೋಹಣ ಮಾಡಿದ್ದರು. ಆದರೆ ಪೀಠದ ದಕ್ಷಿಣ ದಿಕ್ಕಿನ ಬಾಗಿಲು ಮಾತ್ರ ಮುಚ್ಚಿತ್ತು. ಇದುವರೆಗೂ ಯಾರೂ ದಕ್ಷಿಣ ದಿಕ್ಕಿನಿಂದ ಯಾರೂ ಬಂದಿರಲಿಲ್ಲ. ಶಿಷ್ಯರ ಪ್ರಾರ್ಥನೆಯ ಮೇರೆಗೆ ಆಚಾರ್ಯರು ಸರ್ವಜ್ಞಪೀಠದ ದಕ್ಷಿಣ ಬಾಗಿಲನ್ನು ತೆರೆಯಲು ಹೊರಟರು. ಜೈನ, ಬೌದ್ಧ ಮತ್ತು ಚಾರ್ವಾಕ, ಈ ಮೂರು ಮತಾವಲಂಬಿಗಳಿಗೆ ಆರ್ಯಾವರ್ತದಲ್ಲಿ ಅವರ ಸ್ಥಾನ ಕೇವಲ ಇಲ್ಲಿ ಮಾತ್ರ ಉಳಿದಿತ್ತು. ಇವರ ಪ್ರಶ್ನೆಗಳಿಗೆ ಉತ್ತರಿಸಿದ ಮೇಲೆ, ಗೌತಮ, ಈಶ್ವರವಾದಿ ನೈಯ್ಯಾಯಿಕ, ಸಾಂಖ್ಯವಾದಿ,

ಮೀಮಾಂಸಕ ಮುಂತಾದ ವಿದ್ವಾಂಸರ ಪ್ರಶ್ನೆಗಳಿಗೆ ನಸುನಗುತ್ತಾ ಉತ್ತರ ಕೊಟ್ಟು ಶಾಂತವಾಗಿ ಮೆಟ್ಟಿಲುಗಳನ್ನು ಹತ್ತಿದರು. ಅವರು ಸರ್ವಜ್ಞ ಪೀಠದ ಮೇಲೆ ವಿರಾಜಮಾನವಾಗುವ ಹೊತ್ತಿಗೆ ಸಾಕ್ಷಾತ್ ಸರಸ್ವತಿಯೇ ಪ್ರತ್ಯಕ್ಷವಾದಳಂತೆ. ಶಂಕರಾಚಾರ್ಯರು ವಿದ್ವಜನರನ್ನು ಸೋಲಿಸಿ ಶಾರದಾ ಪೀಠದ ದಕ್ಷಿಣದ ದ್ವಾರವನ್ನು  ದಿಗ್ವಿಜಯಾರ್ಥವಾಗಿ ತೆರೆಸಿದರೆಂಬ ಐತಿಹಾಸಿಕ ಸತ್ಯವನ್ನು ಕೇಳಿ ಹೆಮ್ಮೆ ಎನಿಸಿತು. ಆದರೆ ಅಲ್ಲಿ ನಿಂತಿದ್ದ, ಶಿಥಿಲವಾದ ಮಂಟಪ  ಪಾಳು ಬಿದ್ದಿರುವುದನ್ನು ನೋಡಲು ಮನಸ್ಸಿಗೆ ತುಂಬಾ ಬೇಜಾರಾಯಿತು. ಅಲ್ಲಿಂದಲೇ ಶಾರದಾ ಮಾತೆಯನ್ನು ದಕ್ಷಿಣಾಮ್ನಾಯ ಪೀಠವಾದ ಶೃಂಗೇರಿಗೆ ಶಂಕರಾಚಾರ್ಯರು ಕರೆತಂದ ವಿಷಯವನ್ನು ನಾವೆಲ್ಲರೂ ತಿಳಿದಿದ್ದೇವೆ.

ಅಂದು ರಾತ್ರಿ ಶ್ರೀನಗರಕ್ಕೆ ವಾಪಸ್ಸು ಬಂದ ಮೇಲೆ ಒಂದು ಅಹಿತಕರ ಘಟನೆ ನಡೆಯಿತು. ಫೋಟೋಗ್ರಾಫರ್ ಕಾಶಿನಾಥನ professional camera ಕಳೆದು ಹೋಯಿತು. ನಮ್ಮೆಲ್ಲರ ಸಾಮಾನುಗಳನ್ನೂ check ಮಾಡಲಾಯಿತು. ಆದರೂ ಸಿಗಲಿಲ್ಲ. ಅದುವರೆಗೂ ನಮ್ಮ ಪ್ರವಾಸದ ಅತ್ಯಂತ ಸ್ಮರಣೀಯ ಕ್ಷಣಗಳನ್ನು ಹಿಡಿದಿಟ್ಟಿದ್ದ ಕ್ಯಾಮೆರಾ ಕಣ್ಮರೆಯಾಗಿತ್ತು.  ಅದೊಂದು ನಮ್ಮ ಪ್ರವಾಸದಲ್ಲಿ ಕಪ್ಪು ಚುಕ್ಕೆಯಾಗಿ ಉಳಿದು ಬಿಟ್ಟಿತು.

ಆಗಿನ ಕಾಲದಲ್ಲಿ ಕಾಶ್ಮೀರದ ಕೋಟು ಮತ್ತು ಸೀರೆಗಳು ಬಹಳ ಹೆಸರುವಾಸಿಯಾಗಿದ್ರಿಂದ ಎಲ್ಲರೂ ಮನಪೂರ್ತಿಯಾಗಿ ಶಾಪ್ಪಿಂಗ್ ಮಾಡಿದೆವು. ಮರದ ಕೆತ್ತನೆ ಕೆಲಸವೂ ತುಂಬಾ ನಾಜೂಕಾಗಿದ್ದುದರಿಂದ (ಟೀಪಾಯ್, ಲ್ಯಾಂಪ್‌ಸ್ಟ್ಯಾಂಡ್, ಪಾರ್ಟಿಷನ್)ಕೆಲವರು ಪಾರ್ಸೆಲ್ ಮಾಡಿಸಿದರು. ಅಲ್ಲಿಯ ವೇಷಭೂಷಣ ತೊಟ್ಟು ಫೋಟೋ ತೆಗೆಸಿದ್ದೂ ಆಯಿತು. ಅಲ್ಲಿನ ಕಾವಾ ಮತ್ತು ಕಚೋರಿಯನ್ನೂ ಸವಿದು ವಾಪಸ್ ಜಮ್ಮುಗೆ ಬಸ್ನಲ್ಲಿ ಬಂದು ಅಲ್ಲಿಂದ ದೆಹಲಿಗೆ ರೈಲಿನಲ್ಲಿ ವಾಪಸ್ಸಾದೆವು.

ದೆಹಲಿಯಿಂದ ಸಂಜೆ ರೈಲಿನಲ್ಲಿ ನಾವು ಹರಿದ್ವಾರಕ್ಕೆ ಹೋಗಬೇಕಾಗಿತ್ತು. ನಮ್ಮ ಉತ್ಸಾಹ ಎಷ್ಟಿತ್ತೆಂದರೆ ಟೈಮ್ ಯಾಕೆ ವೇಸ್ಟ್ ಮಾಡಬೇಕೂಂತ ದೆಹಲಿ ಶಾಪಿಂಗ್‌ಗೆ ಗುಂಪುಗಳಾಗಿ ಹೊರೆಟೆವು. ಅದೇ ಪೀಕಲಾಟಕ್ಕೆ ಇಟ್ಕೊಳತ್ತೆ ಅನ್ನೋದು ನಮಗೆ ತಿಳೀಲಿಲ್ಲ. ನಮ್ಮ ಶಾಪಿಂಗ್ ಹುಚ್ಚಿನಲ್ಲಿ ಸಮಯದ ಪರಿವೆಯೇ ಅರಿವಾಗ್ತಿರಲಿಲ್ಲ. ಬೆಂಡಿನ ಸುಂದರ ಮೋಡಾಗಳು, ೩ ರೂಪಾಯಿಗೆ ಒಂದು ಅಂತಾ ಪ್ರತಿಯೊಬ್ರೂ ಕನಿಷ್ಠ ೫-೬ ಮೋಡಾಗಳನ್ನು ಖರೀದಿಸಿ ರೈಲಿನಲ್ಲಿ ಅದಕ್ಕೆ ಜಾಗ ಮಾಡಲು ಹರಸಾಹಸ ಪಟ್ಟಿದ್ದನ್ನು ನೆನಸಿಕೊಂಡ್ರೆ ಈಗ ನಗು ಬರುತ್ತೆ. ಅಂತೂ ಕೈಲಿದ್ದ ಕಾಸಿನಲ್ಲೇ ನಮಗೆ ಎಟುಕಿದ ಜಗತ್ತನ್ನು ಗೆದ್ದ ಅನುಭವ ಪಡೆದಿದ್ದೆವು. ಟ್ಯಾಕ್ಸಿಗಳನ್ನು ಹಿಡಿದು ನಾವು ಸ್ಟೇಷನ್ ತಲುಪುವುದರಲ್ಲೇ ಮ್ಯಾನೇಜರ್‌ನ ಕಿರಿಚುವಿಕೆ ಕೇಳಿ ಓಡೋಡಿ ಬಂದೆವು. ನಾವು ಮೂರು ನಾಲ್ಕು ಜನ ರೈಲಿನೊಳಗೆ ಕಾಲಿಟ್ಟಿದ್ದೇ ತಡ , ರೈಲು ಹೊರಟು ಬಿಟ್ಟಿತು. ನಾವು ಇನ್ನೂ ಗಾಬರಿಯಲ್ಲಿದ್ದಾಗಲೇ ನಮ್ಮ headmistress ಜೊತೆ ಇದ್ದ ಇನ್ನಿಬ್ಬರು ಬಂದಿಲ್ಲವೆಂಬುದು ತಿಳಿಯಿತು. ಮಾಸ್ಟರ್ ಆಗಲೇ ಉಗ್ರಾವತಾರ ತಾಳಿದ್ದರು. ಒಬ್ಬ male assistant ಅನ್ನು ರೈಲಿನಿಂದ ಕೆಳಗೆ ನೂಕಿ, ಅವರನ್ನು ಮುಂದಿನ ರೈಲಿನಲ್ಲಿ ಕರೆದುಕೊಂಡು ಬಂದು ಹರಿದ್ವಾರದಲ್ಲಿ ನಮ್ಮನ್ನು ಸೇರಲು ಹೇಳಿದರು. ನಮಗೆಲ್ಲಾ ತಪ್ಪಿತಸ್ಥ ಮನೋಭಾವ. ಮಾಸ್ಟರ್ ಮುಖ ನೋಡಲೂ ಭಯ. ಬೆಳಗ್ಗೆ ನಾವೆಲ್ಲಾ ಕಣ್ತಪ್ಪಿಸಿ ಓಡಾಡಿಕೊಂಡು ತಿಂಡಿ ಮುಗಿಸಿದ್ದಾಯ್ತು. ಅಷ್ಟೊತ್ತಿಗೆ  ದೆಹಲಿಯಿಂದ ಮತ್ತೊಂದು ರೈಲಿನಲ್ಲಿ ಪಯಣಿಸಿ ತಪ್ಪಿಸಿಕೊಂಡವರೂ ಬಂದಾಗಿತ್ತು. ಸರಿ ಬೆಳಗ್ಗೆ ಕಾರ್ಯಕ್ರಮದ ಪ್ರಕಾರ ಹರಿದ್ವಾರದ ಶಾಪಿಂಗ್. ನಮಗ್ಯಾರಿಗೂ ಧೈರ್ಯವೇ ಇಲ್ಲದ ಕಾರಣ ಪೆಚ್ಚು ಪೆಚ್ಚಾಗಿ ಅಲ್ಲಲ್ಲೇ ಓಡಾಡುತ್ತಿದ್ದೆವು. ನಮ್ಮ ಆಶ್ಚರ್ಯಕ್ಕೆ, ಮಾಸ್ಟರ್ ನಮ್ಮ ಹತ್ತಿರ ಬಂದು 'ಶಾಪಿಂಗ್‌ಗೆ ಹೋಗೋಲ್ಲವೇನ್ರೀ' ಎಂದು ನಕ್ಕಾಗ ನಾವೆಲ್ಲಾ ನಾಚಿಕೆ ಬಿಟ್ಟು ಹೋ ಎಂದು ಕಿರಿಚಿದೆವು.  ಮತ್ತೆ ನಮ್ಮ ಎಂದಿನ ಉತ್ಸಾಹದೊಂದಿಗೆ ಹೊರೆಟೆವು. ನಿಜವಾಗಲೂ ಇಂದಿಗೂ ಅಚ್ಚರಿ ಪಡುವ ಸಂಗತಿಯೆಂದರೆ ಹರಿದ್ವಾರದಲ್ಲಿ ಒಂದು ರೂಪಾಯಿಯಿಂದ ಹಿಡಿದು ನೂರು ರೂಪಾಯಿಯವರೆಗೂ ಖರೀದಿಸಬಹುದಿತ್ತು. ನಮಗಂತೂ ಅಲ್ಲಿಯ ಮಾರ್ಕೆಟ್ ನೋಡಿ ಹುಚ್ಚು ಹಿಡಿದ ಹಾಗಾಗಿತ್ತು. ೧೫ ರೂಪಾಯಿಗೆ (೧೯೭೫ರಲ್ಲಿ) ತಂದಿದ್ದ riversable carpet ಇಂದಿಗೂ ಬಣ್ಣ ಸಹ ಮಾಸದೆ  ಬಳಕೆಯಲ್ಲಿದೆ  ಎಂದರೆ ಇಂದಿನ use & throw ಯುಗದಲ್ಲಿ ನಿಮಗೆ ನಂಬಿಕೆ ಹುಟ್ಟುತ್ತೋ ಇಲ್ವೋ ಗೊತ್ತಿಲ್ಲ.  ಕೊನೆ ಕೊನೆಗೆ ನನ್ನಗೆಳತಿಯೊಬ್ಬಳು ಒಂದು ಅಂಗಡಿಯಲ್ಲಿ ಕೊಂಡ ಸಾಮಾನನ್ನು, ಇನ್ನೊಂದು ಅಂಗಡಿಗೆ ಬಂದಾಗ ಅದನ್ನು ಅಲ್ಲೇ ಮರೆತು ಬರುತ್ತಿದ್ದಳು. ರೈಲಿಗೆ ವಾಪಸ್ಸಾದ ಮೇಲೆ ನೋಡಿದರೆ ಎಷ್ಟೋ ಸಾಮಾನು ಇರುತ್ತಲೇ ಇರಲಿಲ್ಲ. ಅಂತೂ ನಮ್ಮ ಹುಚ್ಚು ವ್ಯಾಪಾರ ಮುಗಿಸಿ, ಹೃಷೀಕೇಶಕ್ಕೆ ಹೊರೆಟೆವು.

ಅಲ್ಲಿಯ ಗೀತಾ ಮಂದಿರ, ಲಕ್ಷ್ಮಣಝೂಲ , ಭಗೀರಥನ ಮೂಲಕ ಶಿವನ ಜಟೆಯಿಂದ ಭುವಿಗಿಳಿದು ಬಂದ ಭಾಗೀರಥಿಯ ದರ್ಶನ, ಗಂಗಾ ಆರತಿ ಎಲ್ಲಾ ಮುಗಿಸಿ ಬದರಿಯಾತ್ರೆಗೆ ಅನುವಾದೆವು. ಅಂದು ರಾತ್ರಿ ಒಂದು ಗಂಭೀರವಾದ ಸಭೆ ಸೇರಿಸಿದ್ದರು. ನಾವು ಸುಮಾರು ೮೦ ಜನ ಯುವತಿಯರು ಹೊರಟ ಆ ಪ್ರವಾಸದಲ್ಲಿ ಒಂದು ಗಂಭೀರ ವಿಷಯ ಪ್ರಸ್ತಾಪಿಸಲ್ಪಟ್ಟಿತು. ನಗುಮುಖದ ಮ್ಯಾನೇಜರ್ ಶ್ರೀನಿವಾಸ್ ನಮ್ಮಲ್ಲಿ ವಿನಂತಿಸಿದ್ದೇನೆಂದರೆ ಯಾರಿಗಾದರೂ ಮುಟ್ಟಿನ ಪಾಳಿ ಬರುವುದಿದ್ದರೆ, ಅವರಿಗೆ ಇಲ್ಲೇ ವ್ಯವಸ್ಥೆ ಮಾಡಲಾಗುತ್ತದೆ. ಇದು ಧಾರ್ಮಿಕ ಪ್ರವಾಸವಾದ್ದರಿಂದ, ಹಾದಿ ದುರ್ಗಮವಾದುದರಿಂದ ಮತ್ತು ನಂಬಿಕೆಗೆ ದ್ರೋಹ ಮಾಡದೆ ದಯವಿಟ್ಟು ಸಹಕರಿಸಬೇಕೆಂದು ಕೇಳಿಕೊಂಡರು. ಆದರೆ ಯಾರೂ ನಿಲ್ಲದೆ ಎಲ್ಲರೂ ಹೊರಟಿದ್ದು ಆಶ್ಚರ್ಯವಾದರೂ, ಸುಮುಖವಾಗಿ ಯಾತ್ರೆ ಮುಗಿಸಿ ಬಂದದ್ದಂತೂ ಸತ್ಯ.

ಮಾರನೆ ದಿನ ಬೆಳಗ್ಗೆ ಬದರಿನಾಥ್‌ಗೆ ಎರಡು ದಿನದ ಪಯಣ. ಡಬ್ಬಾದಂತಹ ಬಸ್‌ನಲ್ಲಿ ರಾತ್ರಿಗೆ ಘಡ್ವಾಲ್ ಶ್ರೀನಗರ ತಲುಪಿ, ಅಲ್ಲಿ ಬಿಸಿ ಬಿಸಿಯಾದ ಊಟ ಉಂಡು ಸುಮಾರು ೧೦೦, ಹಾಸಿಗೆ ಇಲ್ಲದ ಬರೀ ಮಂಚಗಳಿದ್ದ dormitory ಲಿ ಎಲ್ರೂ ಮಲಗಿದ್ದೇ ಬಂತು. ಇಡೀ ದಿನ ಬೆಟ್ಟದ ಹಾದಿ ಸವೆಸಿದ್ದ ನಾವು ಎಲ್ಲಿದ್ದೇವೆನ್ನುವುದನ್ನೂ ಮರೆತು ನಿದ್ದೆ ಮಾಡಿದೆವು. ಬೆಳಗ್ಗೆ ಬೇಗನೇ ತಯಾರಾಗಿ ಮುಂದಿನ ಪಯಣಕ್ಕೆ ಸಿದ್ಧವಾದೆವು. ದೇವಪ್ರಯಾಗ, ಕರ್ಣಪ್ರಯಾಗ, ನಂದಪ್ರಯಾಗ, ರುದ್ರಪ್ರಯಾಗ, ವಿಷ್ಣುಪ್ರಯಾಗ, ಜೋಷಿಮಠ, (ಯಾವುದಾದ ಮೇಲೆ ಯಾವುದು ಎಂಬ ನೆನಪು ಅಳಿಸಿದೆ) ಮುಂತಾದುವುಗಳನ್ನೆಲ್ಲಾ ದಾಟಿ ಬದರಿನಾಥನ ಗೋಪುರ ಕಾಣುತ್ತಲೇ ಡ್ರೈವರ್‌ಎರಡೂ ಕೈಗಳನ್ನು ಸ್ಟೀರಿಂಗ್‌ನಿಂದ ಎತ್ತಿ ಬದರಿ ವಿಶಾಲ್ ಕಿ ಜೈ ಎಂದು ಕೈ ಮುಗಿಯುತ್ತಿದ್ದರೆ ನಮಗೆ ಹೃದಯವೇ ಬಾಯಿಗೆ ಬಂದಂತಾಗಿತ್ತು. ಆ ಚಿಕ್ಕ ರಸ್ತೆಯ ತಿರುವುಗಳಲ್ಲಿ, ನಮಗೆ ಒಂದು ಸಲ ಬಂಡೆ ಕೈಗೆ ಹತ್ತಿದರೆ ಮತ್ತೊಂದು ಸಲ ಭಾರಿ ಪ್ರಪಾತ ಹೆದರಿಸುತ್ತಿತ್ತು. ಅಂತೂ ಇಂತೂ ಭಯಾನಕ ಪ್ರಯಾಣ ಮುಗಿಸಿ ಸಂಜೆ ಹೊತ್ತಿಗೆ ಬದರಿ ತಲುಪಿದೆವು.

ಅಲ್ಲೋ ಮೂಳೆ ನಡುಗಿಸುವ ಛಳಿ. ಎಲ್ರೂ ರಜಾಯ್‌ಕೊಂಡು, ಬಿಸಿ ಬಿಸಿ ಊಟ ಉಂಡು ಅವರವರ ಕೋಣೆಯಲ್ಲಿ ಮಲಗಿದೆವು. ಬೆಳಿಗ್ಗೆ ಐದು ಕುಂಡಗಳ ಸ್ನಾನ. ಗೌರಿ ಕುಂಡ, ತಪ್ತ ಕುಂಡ ಮುಂತಾದ ಬಿಸಿ ನೀರಿನ ಹೊಂಡಗಳಲ್ಲಿ ಸ್ನಾನ ಮುಗಿಸಿದೆವು. Sulphur ನೀರಾದ್ರಿಂದ ಹೆಚ್ಚು ಹೊತ್ತು ನೀರಲ್ಲಿರಬಾರದೆಂದು ನಮಗೆ ಮೊದಲೇ ಸೂಚನೆ ಕೊಟ್ಟಿದ್ರು. ಹೀಗೆ ಮೇಲೆ ಬಿಸಿ ನೀರಿನ ಚಿಲುಮೆಗಳಿದ್ದರೂ ಕೆಳಗೆ ಪಾತಾಳದಲ್ಲಿ ಅಲಕನಂದ ನದಿಯಲ್ಲಿ ಹೆಪ್ಪುಗಟ್ಟುವ ಕೊರೆತವಿದ್ದುದು ಕಂಡು ಪ್ರಕೃತಿಯ ವಿಸ್ಮಯಕ್ಕೆ ಬೆರಗಾಗಬೇಕಾಯಿತು. ಸುತ್ತಲೂ ಪರ್ವತಗಳಿಂದಾವೃತವಾಗಿರುವ ಬದರಿಯಲ್ಲಿ ನರ, ನಾರಾಯಣ ಪರ್ವತ ಮತ್ತು ನೀಲಕಂಠ ಪರ್ವತಗಳ ನಡುವೆ ಬದರಿ ಕ್ಷೇತ್ರವಿದೆ. ಬದರಿ ಅಂದರೆ ಬೋರೆಹಣ್ಣಿನ ವೃಕ್ಷ ರೂಪದಲ್ಲಿ ನಾರಾಯಣನಿಗೆ ಲಕ್ಷ್ಮಿ ಆಶ್ರಯ ನೀಡಿರುವುದರಿಂದ, ಬದರಿ ಎಂಬ ಹೆಸರು ಕ್ಷೇತ್ರಕ್ಕೆ ಬಂದಿದೆ.

ಬೆಂಗಳೂರಿನಿಂದಲೇ ಶೇರಿಂಗ್ ಬೇಸಿಸ್ ಮೇಲೆ ನಾರಾಯಣನ ಅಭಿಷೇಕಕ್ಕಾಗಿ ತಂದಿದ್ದ ಗಂಧದ ಎಣ್ಣೆ ಸಮೇತ ಗುಡಿಯೊಳಗೆ ಹೊಕ್ಕೆವು. ದಕ್ಷಿಣದ ದೇವಾಲಯಗಳನ್ನು ನೋಡಿ ಅಭ್ಯಾಸವಿದ್ದ ನಮಗೆ ದೇವರ ಮೂರ್ತಿಗಳು, ಅರ್ಚಕರು ಎಲ್ಲಾ ವಿಚಿತ್ರವೆನಿಸಿತು. ಸಣ್ಣ ಸಣ್ಣ ಪುಟ್ಟ ಕಲ್ಲುಗಳು ಇಷ್ಟೊಂದು ಭಕ್ತರನ್ನು ಆಕರ್ಷಿಸುತ್ತಿದೆಯೇ ಎಂದು ಒಂದು ಕ್ಷಣ ಅನುಮಾನಪಡುವ ಹಾಗಾಯ್ತು. ಇಲ್ಲಿ ವಿಷ್ಣು, ಲಕ್ಷ್ಮೀ, ನರಸಿಂಹ, ಕುಬೇರ, ಗರುಡ, ಉದ್ಧವ, ಗಣೇಶ ಮತ್ತು ನವದುರ್ಗೆಯರ ಸಮೇತ ಪ್ರತಿಷ್ಠಾಪನೆಗೊಂಡಿದ್ದಾನೆ. ಈ ಕ್ಷೇತ್ರ ಉತ್ತರ ಭಾರತದ ತುದಿಯಲ್ಲಿದ್ದರೂ, ಇಲ್ಲಿನ ಮುಖ್ಯ ಅರ್ಚಕರು ಕೇರಳದ ನಂಬೂದಿರಿ ಮನೆತನಕ್ಕೆ ಸೇರಿದವರು. ಅಲ್ಲಿ ಹಿಂದೂ, ಬೌದ್ಧ ಮತ್ತು ಜೈನ ಧರ್ಮಗಳೂ ತಮ್ಮ ಧಾರ್ಮಿಕ ಕೇಂದ್ರವಾಗಿ ಒಪ್ಪಿಕೊಂಡಿದೆಯೆಂದು ತಿಳಿದು, ಧರ್ಮ ಸಹಿಷ್ಣುತೆಯ ಬಗ್ಗೆ ಹೆಮ್ಮೆಯೆನಿಸಿತ್ತು. ಅಲ್ಲಿ ಒಂದು ದಿನ ಇದ್ದು ಮತ್ತೆ ನಮ್ಮ ಇಳಿಯುವ ಪಯಣ ಆರಂಭವಾಯಿತು ಪ್ರವಾಸ ಮುಗಿಯುತ್ತಾ ಬರುತ್ತಿದೆಯೆಲ್ಲಾ ಅನ್ನುವ ಭಾವನೆ ಯೊಂದಿಗೆ ಹೃಷೀಕೇಶಕ್ಕೆ ವಾಪಸ್ಸಾಗಿ ಅಲ್ಲಿಂದ ಬೆಂಗಳೂರಿನ ರೈಲು ಹಿಡಿದಿದ್ದಾಯ್ತು. ಸುಮಾರು ೫-೬ ದಿನದ ದೀರ್ಘ ಪಯಣ ಮುಗಿಸಿ ಮನೆ ತಲುಪಿದ್ದಾಯ್ತು. ನನ್ನ ಗೆಳತಿ ಶೈಲಜನ ಅಮ್ಮ, ಗಂಗೆ ನಮ್ಮ ಜೊತೆ ಬಂದಿದ್ದಾಳೆಂದು ನಮ್ಮಿಬ್ಬರಿಗೂ ಆರತಿ ಮಾಡಿ ಒಳಗೆ ಕರೆದುಕೊಂಡದ್ದು ಜೀವನದಲ್ಲಿ ಮರೆಯುವ ಹಾಗೇ ಇಲ್ಲ. ಇವತ್ತಿಗೂ ರಾಜಕುಮಾರ್‌ನ ಹಾಡು 'ಅಂದಿನ ದಿನಗಳು ಕನಸು ಎಂದು ತಿಳಿಯಲೇ' ಎಂದು ಹಾಡುವ ಹಾಗಾಗುತ್ತದೆ.

# ಮೂವತ್ತಾರು ಇಪ್ಪತ್ತಾನಾಲ್ಕು ಮೂವತ್ತಾರು



(ಉಮಾ ರಾವ್ ಕಥೆಗಳು) ✍ **ಉಮಾ ರಾವ್**

ಆ ಇಡೀ ಪೆಟ್ರೋ ಕೆಮಿಕಲ್ ಕಾಲೋನಿಯಲ್ಲಿ ನಿರ್ಮಲಾ ಮೆನನ್‌ಳನ್ನು ಕಂಡು ಅಸೂಯೆ ಪಡದ ಹೆಂಗಸರು ತುಂಬಾ ಕಡಿಮೆ. ಅವರಲ್ಲಿ ಹಲವಾರು ಜನ ಅವಳನ್ನು ವಿಧವಿಧವಾಗಿ ಆಡಿಕೊಳ್ಳುವ ಮೂಲಕ ತಮ್ಮ ಹೊಟ್ಟೆ ಉರಿಯನ್ನು ಹೊರಹಾಕಿ ಒಂದು ರೀತಿಯ ಬಿಡುಗಡೆಯ ಸುಖ ಅನುಭವಿಸುತ್ತಿದ್ದರು.

"ಅಲ್ರೀ, ಈ ವಯಸ್ಸಿನಲ್ಲಿ ಭರತನಾಟ್ಯ ಕಲಿತುಕೊಂಡರೆ ಬರಬೇಕಲ್ಲಾ ಅದೇನೋ ಹೇಳ್ತಾರಲ್ಲಾ ಗಿಡವಾಗಿ ಬಗ್ಗದ್ದು ಅಂತ... ಗ್ರೇಸ್ ಇಲ್ಲಾರೀ ಒಳ್ಳೇ ಡ್ರಿಲ್ ಥರಾ ಮಾಡ್ತಾಳೆ..."

"ಇವಳು ದಿನವೆಲ್ಲಾ ಥಕಥೈ ಅಂತ ಕುಣೀತಾ ಇದ್ರೆ ಆ ಗಂಡ ಮಗನ ಗತಿ ದೇವರೇ ಗತಿ..."

"ಪಾಪ, ಅವಳ ಗಂಡ ತುಂಬಾ ಒಳ್ಳೇವ್ರು ರೀ. ನಮ್ಮ ಮಿಸ್ಟರ್ ಹೇಳ್ತಾನೇ ಇದ್ದಾರಲ್ಲಾ... ಅವರಿಬ್ರೂ ಒಂದೇ ಡಿಪಾರ್ಟ್‌ಮೆಂಟ್ ತಾನೇ.. ಅವನಾಗೋ ಹೊತ್ತಿಗೆ ಸಹಿಸಿ ಕೊಳ್ತಾ ಇದ್ದಾನೆ ಅಂತ..."

"ಮತ್ತೆ. ಇವಳು ಮಾಡಿದ್ದಕ್ಕೆಲ್ಲಾ ಸೈ ಅಂತಾನೆ..."

"ಮೊನ್ನೆ ಅರಂಗೇಟ್ರಂಗೆ ಪೂರ್ತಿ ಒಂದು ಲಕ್ಷ ಖರ್ಚಾಯಿತಂತೆ!"

"ಆಗದೇ ಇರುತ್ತಾ ಈಗಿನ ಕಾಲದಲ್ಲಿ... ಆ ಹಾಲ್, ಅಷ್ಟೊಂದು ಪಬ್ಲಿಸಿಟಿ, ಆರ್ಕೆಸ್ಟ್ರಾ..."

"ಈ ಕೇರಳದೋರಿಗೆಲ್ಲಾ ತುಂಬಾ ಆಸ್ತಿ ಇರುತ್ತೇರಿ!... ನಮ್ಮ ಹಾಗಲ್ಲ..." ಇದೆಲ್ಲಾ ಸರಿ. ಆದ್ರೆ ಚಿಕ್ಕ ಹುಡುಗೀನೇನೀ... ಬೆಳಗಾದ್ರೆ ಮಗನಿಗೆ ಹತ್ತು ವರ್ಷ.

ಹೀಗೆಲ್ಲಾ ಮಾತಾಡುವ ಹೆಂಗಸರಿಗೆ ಒಳಗೊಳಗೇ ನಿರ್ಮಲಾ ಹಾಗೇ ತಾವೂ ಇದ್ದಿದ್ದರೆ ಎಂಬ ಆಸೆ ಚುಚ್ಚುತ್ತಲೇ ಇತ್ತು. ಜಗಮಗಿಸುವ ಅಲಂಕಾರದಲ್ಲಿ ಅವಳು ಕೈ ಮುಗಿಯುತ್ತಾ ಸ್ಟೇಜಿನ ಮೇಲೆ ನಡೆದು ಬಂದಾಗ ಆಗುತ್ತಿದ್ದ ಚಪ್ಪಾಳೆಗಳ ಸುರಿ ಮಳೆಯಿಂದ ಅವರ ಹೊಟ್ಟೆ ಕಿವುಚುತ್ತಿತ್ತು.

ಆದರೆ ನಿರ್ಮಲಾ ಇದಕ್ಕೆಲ್ಲಾ ಕೇರ್ ಮಾಡುತ್ತಿರಲಿಲ್ಲ. ಕೇರ್ ಮಾಡಿದ್ದರೆ, ಮದುವೆಯಾಗಿ ಅದೂ ಒಂದು ಮಗುವಾದ ಮೇಲೆ ಭರತನಾಟ್ಯ ಕಲಿಯಲು ಪ್ರಾರಂಭಿಸಿ ಮುವತ್ನಾಲ್ಕರ ವಯಸ್ಸಲ್ಲಿ ಅರಂಗೇಟ್ರಂ ಮಾಡಲು ಆಗುತ್ತಿರಲಿಲ್ಲ.

****

ನಿರ್ಮಲಾ ಅಂಥಾ ಸುಂದರಿಯೇನಲ್ಲ. ಹಿತವಾದ ವ್ಯಕ್ತಿತ್ವ ಅಷ್ಟೆ. ಸುಮಾರು ಕಪ್ಪು ಮೈ ಬಣ್ಣ. ತೆಳ್ಳಗೆ ಎತ್ತರವಾಗಿದ್ದ ಮೈಕಟ್ಟು, ಮೊಣಕಾಲವರೆಗೂ ಬರುತ್ತಿದ್ದ ಉದ್ದ ಜಡೆ. ಬಣ್ಣಬಣ್ಣದ ಕಾಟನ್ ಸೀರೆಗಳನ್ನುಟ್ಟು ಹಣೆಯ ಮೇಲೆ ಕುಂಕುಮ ಚಂದನ ಹಚ್ಚಿ, ಲಘುವಾದ ಚಿನ್ನದ ಆಭರಣ ತೊಟ್ಟು ಟಿಪ್‌ಟಾಪಾಗಿ ಇರುತ್ತಿದ್ದಳು. ಮಾತುಮಾತಿಗೂ ಹರಿದು ಬರುತ್ತಿದ್ದ ನಗು. ಅವಳ ಲವಲವಿಕೆ ಅವಳಿಗೊಂದು ಕಳೆ ಕೊಡುತ್ತಿತ್ತು. ದಿನಾ ಬೆಳಗ್ಗೆ ಗಂಡ, ಮಗನನ್ನು ಕಳಿಸಿ, ಮನೆಗೆಲಸ ಮುಗಿಸಿ ಛತ್ರಿ ಹಿಡಿದು ಹತ್ತು ಗಂಟೆಗೆ ಸರಿಯಾಗಿ ಡಾನ್ಸ್ ಕ್ಲಾಸಿಗೆ ಹೊರಡುತ್ತಿದ್ದಳು.

'ನಾನೆಂದೂ ಬಿಸಿಲಲ್ಲಿ ಛತ್ರಿ ಹಿಡಿಯದೇ ಹೋಗಲ್ಲಮ್ಮ. ಮುಖ ಸುಟ್ಟ ಬದನೆಕಾಯಿ ಆಗುತ್ತೆ. ಒಂದು ಸಲ ಕಾಂಪ್ಲೆಕ್ಷನ್ ಕೆಟ್ಟು ಹೋದರೆ ಏನು ಮಾಡಿದ್ರೂ ಸರಿ ಹೋಗಲ್ಲ. ಭರತನಾಟ್ಯಂ ಡಾನ್ಸರ್ ಅಂದಮೇಲೆ ಇದೆಲ್ಲಾ ಕೇರ್ ತಗೊಳ್ಳಲೇ ಬೇಕಲ್ಲಾ. ಅದಕ್ಕೆ ದಿನಾ ಎರಡು ಲೋಟ ಹಾಲೂ ಎಂದೂ ತಪ್ಪಿಸೊಲ್ಲ. ಎನರ್ಜಿ ಎಷ್ಟಿದ್ದರೂ ಬೇಕಲ್ಲಾ..." ಎನ್ನುತ್ತಿದ್ದಳು.

ಅವಳು ಕಾಲೋನಿಯ ಬೇರೆ ಹೆಂಗಸರಂತೆ ದಿನಾ ಮಧ್ಯಾಹ್ನದ ಹರಟೆಗೆ ಸೇರುತ್ತಿ ರಲಿಲ್ಲ. ತನ್ನ ಮನೆ ಆಯ್ತು, ಕೆಲಸ ಆಯ್ತು, ಡಾನ್ಸ್ ಆಯ್ತು. ಎಲ್ಲಾದರೂ ತರಕಾರಿ ಮಾರ್ಕೆಟ್ಟಿನಲ್ಲೋ, ಸ್ಕೂಲಿನ ಪೇರೆಂಟ್ಸ್ ಟೀಚರ್ಸ್ ಮೀಟಿಂಗಿನಲ್ಲೋ ಅವರೆಲ್ಲಾ ಸಿಕ್ಕಾಗ "ಅಯ್ಯೋ, ಮನೇಲಿ ಇನ್ನೂ ತುಂಬಾ ಕೆಲಸ ಬಾಕಿ ಇದೆ. ಬೇಗ ಹೋಗಬೇಕು" ಎಂದು ವಾಚ್ ನೋಡುತ್ತಲೇ ಅವರೊಡನೆ ಆತ್ಮೀಯವಾಗಿ ಹರಟುತ್ತಿದ್ದಳು. ಮಾತು ಮಾತಿಗೂ ಹರಿದು ಬರುವ ಕುಲುಕುಲು ನಗು. ಪ್ರತಿ ಮಾತಿನಲ್ಲಿ ತಾನು ಎಲ್ಲಾ ಹೆಂಗಸರಂತೆ ಅಲ್ಲ ಎಂಬ ಅವಳ ಧೋರಣೆ ಎದ್ದು ತೋರುತ್ತದೆ, ತಮ್ಮ ಕೊಂಕು ಮಾತುಗಳು ಅವಳನ್ನು ನೋಯಿಸುವ ಬದಲು ಅವಳಲ್ಲಿ ವಿಚಿತ್ರ ಹುರುಪು ತುಂಬುತ್ತದೆ ಎಂದು ಅವರಿಗೆಲ್ಲಾ ಅನ್ನಿಸುತ್ತಿತ್ತು.

ಅಂಥಾ ನಿರ್ಮಲಾ ಮೆನನ್ ಅಂದು ಮಧ್ಯಾಹ್ನ ಮಾಲಿನಿಯ ಮನೆಗೆ ಬಂದಾಗ ಅವಳಿಗೆ ತುಂಬಾ ಆಶ್ಚರ್ಯವಾಯಿತು. ಸಂಜೆಯ ರಿಹರ್ಸಲ್‌ಗಾಗಿ ಸಂಭಾಷಣೆಗಳನ್ನು ಓದಿಕೊಳ್ಳುತ್ತಾ ಕುಳಿತಿದ್ದ ಅವಳಿಗೆ ಕರೆಗಂಟೆ ಕೇಳಿದಾಗ ಬಂದವಳು ನಿರ್ಮಲಾ ಇರಬಹುದೆಂಬ ಅನುಮಾನ ಎಳ್ಳಷ್ಟೂ ಇರಲಿಲ್ಲ.

"ನಾನು ಹೀಗೆ ಇದ್ದಕ್ಕಿದ್ದಂತೆ ಪ್ರತ್ಯಕ್ಷಳಾಗಿದ್ದು ಕಂಡು ನಿಂಗೆ ಆಶ್ಚರ್ಯ ಆಗಿರಬೇಕಲ್ಲಾ. ಬಿಜಿಯಾಗಿದೀಯಾ... ಏನೋ ಓದಿರೋ ಹಾಗಿದೆ..." ಮಾಲಿನಿ ಬಾಗಿಲು ತೆರೆದಂತೆಯೇ ಅನುಮಾನಿಸಿದಳು ನಿರ್ಮಲಾ.

'ಇಲ್ಲ, ಅಂಥಾ ಮಹತ್ವದ್ದೇನೂ ಅಲ್ಲ. ಆಮೇಲೆ ನೋಡ್ಕೋತೀನಿ ಬಾ... ಯ ಆರ್ ಆಲ್ವೇಸ್ ವೆಲ್‌ಕಮ್ ಎನ್ನುತ್ತಾ ಮಾಲಿನಿ ಒಳನಡೆದಳು. ನಿಂತೇ ಇದ್ದ ನಿರ್ಮಲಾಗೆ ಕೂತ್ಕೋ ಎನ್ನುತ್ತಾ ಸೋಫಾ ತೋರಿಸಿದಳು.

ನಿರ್ಮಲಾ ಸುತ್ತಮುತ್ತ ಕಣ್ಣುಹಾಯಿಸುತ್ತಾ "ಮಾಲಿನಿ... ನಂಗೆ ತುಂಬಾ ಕೆಲಸ ಇತ್ತು ಮನೇಲಿ... ಆದ್ರೂ ಎಲ್ಲಾ ಹಾಗೇ ಬಿಟ್ಟು ಬಂದಿದೀನಿ... ಈ ಟೈಮ್‌ನಲ್ಲಾರೆ ನೀನು ಒಬ್ಬಳೇ ಇರಬಹುದೂಂತ ಬಂದೆ... ಮನೇಲಿ ಯಾರೂ ಇಲ್ಲ ತಾನೇ... ನಿನ್ನ ಹಸ್ಬೆಂಡ್, ವಿನಯ್..." ಎಂದಳು.

"ಇಲ್ಲಮ್ಮಾ ಇಬ್ರೂ ಬರೋದು ಸಂಜೆ ಆರು ಗಂಟೆಗೆ... ಏನಂಥಾ ವಿಷಯ..." ಎಂದು ಮಾಲಿನಿ ನಕ್ಕಳು.

"ನೋಡು, ನಾನು ನಿನ್ನ ಜೊತೆ ಒಂದು ತುಂಬಾ ಪರ್ಸನಲ್ ಆದ ವಿಷಯ ಮಾತಾಡಬೇಕಾಗಿತ್ತು... ಅದು ಯಾರಿಗೂ ತಿಳೀಬಾರದು... ಅದಕ್ಕೇ..."

ನಿರ್ಮಲಾ ಮಾತುಗಳು, ಅವಳ ಕಸಿವಿಸಿ ಕಂಡ ಮಾಲಿನಿಯ ಮಿದುಳು ವೇಗವಾಗಿ ಕೆಲಸ ಮಾಡತೊಡಗಿತು. ಅಂಥಾದ್ದೇನಿರಬಹುದು ಇವಳಿಗೆ ತನ್ನ ಹತ್ತಿರ ಹೇಳಿಕೊಳ್ಳೋಕೆ? ತನ್ನ ಹತ್ತಿರ ಅಂಥಾ ಆತ್ಮೀಯತೆಯೂ ಇಲ್ಲ. ಏನಿರಬಹುದು. ತನ್ನಿಂದ ಏನಾದರೂ ತಪ್ಪಾಗಿದೆಯೇ. ಅಥವಾ ಇವಳೇನಾದರೂ ಯಾವುದೋ ಪ್ರೇಮ ಸಂಬಂಧದಲ್ಲಿ ಸಿಕ್ಕಿ ಹಾಕಿಕೊಂಡು...

"ನೋಡು ಮಾಲಿನಿ, ಈಗ ನಾನು ನಿಂಗೆ ಹೇಳೋ ವಿಷಯ. ಪ್ಲೀಸ್ ಕೀಪ್ ಇಟ್ ಟು ಯುವರ್‌ಸೆಲ್ಫ್, ಯಾರಿಗೂ ಹೇಳ್ಬೇಡ..." ಎಂದು ನಿರ್ಮಲಾ ಮತ್ತೆ ಸುತ್ತ ಮುತ್ತ ಕಣ್ಣು ಹಾಯಿಸಿದಳು.

"ಯಾರಿಗೂ ಹೇಳೊಲ್ಲ. ರಿಲ್ಯಾಕ್ಸ್... ಖಂಡಿತ..." ಮಾಲಿನಿ ಬಾಗಿ ಅವಳ ಕೈ ಅದುಮಿದಳು. ಅವಳ ಕತೆ ಶುರುವಾಯಿತು.

ಚಿಕ್ಕಂದಿನಿಂದ ಅವಳಿಗೆ ಒಳ್ಳೆ ಮೈಕಟ್ಟಿನ ಹುಚ್ಚಂತೆ. ತಾನೂ ಹೇಮಾಮಾಲಿನಿ, ವೈಜಯಂತಿಯಾಗಬೇಕು ಅವರಂತೆಯೇ ಡಾನ್ಸ್ ಮಾಡಬೇಕೂಂತ ಕನಸಂತೆ. ಹನ್ನೊಂದು ಹನ್ನೆರಡು ವಯಸ್ಸಿಗೆ ಬರುತ್ತಿದ್ದಂತೆಯೇ ಇವಳ ಗೆಳತಿಯರೆಲ್ಲಾ ಮೈಕೈ ತುಂಬಿಕೊಂಡರಂತೆ. ಇವಳು ಮಾತ್ರ ಕಡ್ಡಿಯಾಗಿಯೇ ಉಳಿದಳಂತೆ. ಅವರೆಲ್ಲಾ "ನಿರ್ಮಲಾಗೆ ಬ್ರಾ ಕೊಳ್ಳೋ ದುಡ್ಡೇ ಉಳೀತು. ಅವಳಿಗಿರೋದು ಬರಿ ಮಸ್ಕಿಟೋ ಬೈಟ್ಸ್" ಅಂತ ರೇಗಿಸಿದ್ದರಂತೆ. ಹುಡುಗರೆಲ್ಲಾ ಇವಳಿಗೆ ಟೆನ್ನಿಸ್ ಕೋರ್ಟ್ ಎಂದೇ ಹೆಸರಿಟ್ಟಿದ್ದಂತೆ. ಏನೇನೋ ವ್ಯಾಯಾಮ ಎಲ್ಲಾ ಮಾಡಿದ್ರೂ ಪ್ರಯೋಜನವಾಗಲಿಲ್ಲವಂತೆ. ಹೀಗಾಗಿ ಕೀಳರಿಮೆಯಿಂದ ಕುಗ್ಗಿ ಹೋದಳಂತೆ.

'ನನಗೆಷ್ಟು ಕಾಂಪ್ಲೆಕ್ಸ್ ಇತ್ತು ಗೊತ್ತಾ ಮಾಲಿನಿ. ಹೆಂಗಸಿಗೆ ಇದಕ್ಕಿಂತ ಮುಖ್ಯ ಏನು ಹೇಳು..." ಎಂದು ಒಂದು ಕ್ಷಣ ಸುಮ್ಮನಾಗಿ, ಮತ್ತೆ ಮುಂದುವರಿಸಿದಳು.

"ನೋಡು... ಎಷ್ಟೋ ಜನ ಅಂತಿದ್ರು ಇಪ್ಪತ್ತಾದ್ರೆ ಫಿಗರ್ ಬೆಟರ್ ಆಗುತ್ತೇಂತ. ಏನೂ ಆಗಲಿಲ್ಲ. ಒಂದು ಮಗುವಾದ ಮೇಲೆ ಸರಿ ಹೋಗುತ್ತೇಂತ ಡಾಕ್ಟರ್ ಹೇಳಿದ್ರು, ಹಾಗೂ ಆಗಲಿಲ್ಲ. ಹಾಗೆ ನೋಡಿದ್ರೆ ನಾನು ತುಂಬಾ ಲಕ್ಕಿ. ನನ್ನ ಗಂಡ ಎಷ್ಟು ಒಳ್ಳೇವ್ರು ಗೊತ್ತಾ... ಅವರಿಗೂ ಎಕ್ಸ್‌ಪೆಕ್ಟೇಶನ್ಸ್ ಇರುತ್ತಲ್ಲಾ... ಆದ್ರೆ ಒಂದು ದಿನ ಕಾಮೆಂಟ್ ಮಾಡಲಿಲ್ಲ..."

ಮಾಲಿನಿ ಅವಳ ಕಣ್ಣು ತಪ್ಪಿಸಿ "ಕಾಫಿ ಕುಡೀತೀಯಾ" ಎಂದಳು. "ಆಮೇಲೆ... ಬರೀ ಒಂದು ಲೋಟ ನೀರು ಕೊಡು" ಎಂದಳು ನಿರ್ಮಲಾ. ಮಾಲಿನಿ ನೀರು ತಂದಂತೆಯೇ ಗಟಗಟನೆ ಲೋಟ ಖಾಲಿ ಮಾಡಿ ಮತ್ತೆ ಮುಂದುವರಿಸಿದಳು.

"ಏನು ಹೇಳ್ತಾ ಇದ್ದೆ. ಹೂಂ ಡ್ಯಾನ್ಸ್ ಮಾಡೋಕೆ ಶುರು ಮಾಡಿದ ಮೇಲಂತೂ ಪ್ಯಾಡೆಡ್ ಬ್ರಾ ಹಾಕಿ ಹಾಕಿ ಬೇಸರ ಬಂದ್ಹೋಯ್ತು... ಮೊನ್ನೆ ಪೇಪರಿನಲ್ಲಿ ಬಂದಿದ್ದ ಸುದ್ದಿ ನೋಡಿ ಎಷ್ಟು ಖುಷಿಯಾಯ್ತು. ಒಂದು ಚಿಕ್ಕ ಆಪರೇಷನ್‌ನಿಂದ ಎಂಥವರೂ ಮುವತ್ತಾರೂ ಇಪ್ಪತ್ನಾಲ್ಕು ಮುವತ್ತಾರು ಫಿಗರ್ ಪಡೀಬಹುದಂತೆ... ಈಗ ಇದು ಇಂಡಿಯಾಗೂ ಬಂದಿಯೆಯಂತೆ..."

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು.....

# ಅಪೂರ್ವ ರಂಗಚೇತನ ಸದಾನಂದ ಸುವರ್ಣ



✍ ಪ್ರೊ. ಜಿ. ಎನ್. ಉಪಾಧ್ಯ

ದೂರದ ಮುಂಬೈಯನ್ನು ಕರ್ಮಭೂಮಿಯನ್ನಾಗಿ ಮಾಡಿಕೊಂಡು ಕನ್ನಡ ರಂಗಭೂಮಿ, ಸಿನಿಮಾ, ಭಾಷೆ, ಸಾಹಿತ್ಯ ಸಂಸ್ಕೃತಿಗಳ ಬೆಳವಣಿಗೆಗೆ ಅವಿರತವಾಗಿ ಶ್ರಮಿಸಿದ ಮಹಾನ್ ಚೇತನ ಸದಾನಂದ ಸುವರ್ಣ. ಮುಂಬೈ ವಿಶ್ವವಿದ್ಯಾಲಯದಲ್ಲಿ ಶಿವರಾಮ ಕಾರಂತ ದತ್ತಿನಿಧಿಯನ್ನು ಸ್ಥಾಪನೆ ಮಾಡಿದ ಹಿರಿಮೆ ಅವರಿಗೆ ಸಲ್ಲುತ್ತದೆ. ಸಾರ್ಥಕ ಬದುಕನ್ನು ನಡೆಸಿದ ಅಪರೂಪದ ಸಾಧಕ ಸುವರ್ಣ ಅವರು ಈಗ ನೆನಪು ಮಾತ್ರ. ಅವರ ಜೀವನ (1931-2024)ಯಾನದ ಕಿರು ಲೇಖನ ಇಲ್ಲಿದೆ.

ಕನ್ನಡ ರಂಗಭೂಮಿ ಹಾಗೂ ಚಲನಚಿತ್ರರಂಗದ ಸೃಜನಶೀಲ ಪ್ರತಿಭೆಗಳಲ್ಲಿ ಸದಾನಂದ ಸುವರ್ಣ ಅವರದು ಎದ್ದುಕಾಣುವ ಹೆಸರು. ದೂರದ ಮುಂಬೈಯಲ್ಲಿ ಅವರು ಗೈದ ಸಾಂಸ್ಕೃತಿಕ ಪರಿಚಾರಿಕೆ ಯಾರನ್ನೂ ಬೆರಗುಗೊಳಿಸದೇ ಬಿಡದು.ನಾಟಕಕಾರ, ನಟ, ರಂಗಭೂಮಿ ಹಾಗೂ ಸಿನಿಮಾ ನಿರ್ದೇಶಕ, ರಂಗತಜ್ಞ, ರಂಗಶಿಕ್ಷಕ, ಪ್ರಕಾಶಕ,ಹೀಗೆ ಹತ್ತಾರು ನೆಲೆಗಳಿಂದ ಬಹುಭಾಷಾ ರಂಗಭೂಮಿಯೊಡನೆ ಘನಿಷ್ಠ ಸಂಬಂಧವನ್ನು ಅವರು ಬೆಸೆದು ಉಳಿಸಿಕೊಂಡು ಬಂದವರು. ರಂಗಭೂಮಿ ಅವರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಬದುಕಿನ ಯಥಾರ್ಥ ದರ್ಶನ ಸಾಧ್ಯವಾಗುವುದು ರಂಗಭೂಮಿಯಲ್ಲಿ ಎಂಬ ದೃಢ ನಿಲುವು ಅವರದಾಗಿತ್ತು. ಸುವರ್ಣ ಅವರು ರಂಗಭೂಮಿಯಲ್ಲಿಯೇ ಬೆಳೆದವರು. ಅದನ್ನೇ ತಮ್ಮ ಅನಂತ ಆಸಕ್ತಿಯ ಮಾರ್ಗವನ್ನಾಗಿ ಆಯ್ದುಕೊಂಡವರು. ರಂಗಭೂಮಿಯ ಉತ್ಕಟ ಉಪಾಸಕರಾದ ಅವರ ಅನುಭವ ಬೆಳ್ಳಿತೆರೆಯಲ್ಲೂ ಮಿಂಚಿತು. ಸದಭಿರುಚಿಯ ಚಲನಚಿತ್ರ ಕ್ಷೇತ್ರದಲ್ಲಿಯೂ ಅವರು ಸೈ ಎನಿಸಿಕೊಂಡರು. ಸದಾನಂದ ಸುವರ್ಣ ಅವರಲ್ಲಿ ಎದ್ದು ಕಾಣುವ ಗುಣವೆಂದರೆ ಪ್ರಯೋಗಶೀಲತೆ. ಅವರ ಇಡೀ ಬದುಕು ಪ್ರಯೋಗಗಳಿಂದ ಕೂಡಿದ್ದು ವಿಶೇಷ. ಮುಂಬಯಿಯ ದೈನಂದಿನ ತಾಪತ್ರಯಗಳಲ್ಲಿ ಕಳೆದು ಹೋಗದೆ ಯಶಸ್ಸು ಬಂದಾಗ ಹಿಗ್ಗದೆ ಸಮಚಿತ್ತವನ್ನು ಕಾಯ್ದುಕೊಂಡು ಬಂದ ಸಂವೇದನಶೀಲ ಮನಸ್ಸು ಅವರದಾಗಿತ್ತು.



ಸಾಹಿತ್ಯ, ಸಂಗೀತ, ಸಿನಿಮಾ, ರಂಗಭೂಮಿ ಹೀಗೆ ಬದುಕಿನ ಬೇರೆ ಬೇರೆ ಕ್ಷೇತ್ರಗಳಿಗೆ ಕ್ರಿಯಾಶೀಲವಾಗಿ ಸ್ಪಂದಿಸಿದ ಸುವರ್ಣ ಅವರಲ್ಲಿ ರಸಿಕತೆ ಹಾಗೂ ವಿದ್ವತ್ತು ಚೆನ್ನಾಗಿ ಮೇಳೈಸಿಕೊಂಡದ್ದು ಅವರ ಯಶಸ್ಸಿನ ಗುಟ್ಟು.

ಸದಾನಂದರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿಯವರು. 1931ರ ಡಿಸೆಂಬರ್ 24ರಂದು ಜನಿಸಿದ ಅವರಿಗೆ ಎಳವೆಯಿಂದಲೇ ನಾಟಕಗಳ ಗೀಳು ಬಲವಾಗಿ ಅಂಟಿಕೊಂಡಿತು. ಬಡತನ ಕಾರಣವಾಗಿ ಚಿಕ್ಕಂದಿನಲ್ಲಿಯೇ ಹುಟ್ಟೂರು ತೊರೆದು ಮುಂಬಯಿಗೆ ಬಂದರು. ಮುಂಬಯಿಯ ಮೊಗವೀರ ರಾತ್ರಿ ಶಾಲೆ ಮುಂಬರುವ ಒಬ್ಬ ಸೃಜನಶೀಲ ಪ್ರತಿಭೆಗೆ ಪ್ರೋತ್ಸಾಹ ನೀಡಿತು. ಬೆಳೆಯುವ ಸಿರಿ ಮೊಳಕೆಯಲ್ಲೇ ಎಂಬಂತೆ ವಿದ್ಯಾರ್ಥಿ ದೆಸೆಯಲ್ಲಿಯೇ 'ಕುರುಡನ ಸಂಗೀತ' ಎಂಬ ನಾಟಕವನ್ನು ಅವರು ಬರೆದು ನಿರ್ದೇಶಿಸಿ ಬದುಕಿನ ದಾರಿಯನ್ನು ಕಂಡುಕೊಂಡರು.ಕನ್ನಡದ ಜತೆ ಜತೆಗೆ ಹಿಂದಿ, ಗುಜರಾತಿ, ಮರಾಠಿ, ಇಂಗ್ಲೀಷ್ ನಾಟಕಗಳ ಆಳ-ಅಗಲಗಳ ಪರಿಚಯವನ್ನೂ ಮಾಡಿಕೊಂಡರು. ಮುಂಬಯಿಯ ಕನ್ನಡ ರಂಗಭೂಮಿಯನ್ನು ಗಟ್ಟಿಗೊಳಿಸಲು ಕಟಿಬದ್ಧರಾದರು . ಗೆಳೆಯರ ಗುಂಪೊಂದನ್ನು ಸೇರಿಸಿ 'ಉದಯ ಕಲಾನಿಕೇತನ' ಎಂಬ ಹವ್ಯಾಸಿ ನಾಟಕ ಸಂಸ್ಥೆಯೊಂದನ್ನು ಹುಟ್ಟುಹಾಕಿದರು.ತಾವೇ ಹತ್ತಾರು ನಾಟಕಗಳನ್ನು ಬರೆದು ಆಡಿಸಿದ್ದಲ್ಲದೆ ಹೊಸ ಮುಖಗಳಿಗೆ ಬಣ್ಣ ಹಚ್ಚಿ ಅಭಿನಯ ಕಲಿಸಿ ರಂಗಮಂಚದ ಮೇಲೆ ತಂದರು. ಹತ್ತು ವರ್ಷಗಳ ಕಾಲ ಸುವರ್ಣ ಅವರು ಬರೆದ ನಾಟಕಗಳು ಮುಂಬೈಯಲ್ಲಿ ಶಾಲಾ ವಾರ್ಷಿಕೋತ್ಸವಗಳಲ್ಲಿ ಸಂಘ-ಸಂಸ್ಥೆಗಳ ಸ್ನೇಹಸಮ್ಮಿಲನಗಳಲ್ಲಿ ಜಯಭೇರಿ ಬಾರಿಸಿದವು.

ಕಲಾ ನಿಕೇತನಕ್ಕೆ ಹೊಸ ಕಳೆ ತರಲು ಸದಾನಂದರು ಮತ್ತೆ ವಿದ್ಯಾರ್ಥಿಯಾದರು. ಥಿಯೇಟರ್ ಟ್ರೈನಿಂಗ್ ಡಿಪ್ಲೊಮ ಕೋರ್ಸಿಗೆ ಸೇರಿಕೊಂಡರು. ಅಲ್ಲಿ ರಂಗತಜ್ಞರೊಂದಿಗೆ ಜಿಜ್ಞಾಸೆ ಆರಂಭಿಸಿದಾಗ ನಾನೊಬ್ಬ ನಿರ್ದೇಶಕ ಎಂಬ ಅಮಲು ಇಳಿದು ಹೋಯಿತು ಎಂದು ಇಂದಿಗೂ ಅವರು ಆ ದಿನಗಳನ್ನು ಸ್ಮರಿಸಿಕೊಳ್ಳುತ್ತಾರೆ. ಅನಂತರ ಭಾರತೀಯ ವಿದ್ಯಾಭವನದಿಂದ ಸಮೂಹ ಮಾಧ್ಯಮದಲ್ಲಿ ಡಿಪ್ಲೋಮ, ಪುಣೆಯ ಸಿನಿಮಾ ಮತ್ತು ಟೆಲಿವಿಜನ್ ಸಂಸ್ಥೆಯಲ್ಲಿ, ಚಲನಚಿತ್ರ ರಸಗ್ರಹಣ ಶಿಬಿರಾರ್ಥಿಯಾಗಿ, ಮುಂಬಯಿಯ ಐ.ಎ. ಸೊಸೈಟಿಯಲ್ಲಿ ಫೋಟೊಗ್ರಾಫಿಯಲ್ಲಿ ವಿಶೇಷ ತರಬೇತಿ ಪಡೆದರು. ರಂಗಭೂಮಿಯ ಹೊಸ ಸಾಧ್ಯತೆಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಕನ್ನಡ ನಾಟಕಗಳಿಗೆ ಹೊಸತನ ತುಂಬಿದರು.

ದೊರೆ ಈಡಿಪಸ್ (ಅನುವಾದ ಪಿ. ಲಂಕೇಶ್), ಕದಡಿದ ನೀರು (ಜಿ.ಬಿ. ಜೋಶಿ), ಪ್ರಜಾಪ್ರಭುತ್ವ - ಲೊಳಲೊಟ್ಟೆ (ಶ್ರೀರಂಗ), ಧರ್ಮಚಕ್ರ ಮೊದಲಾದ ಐವತ್ತಕ್ಕು ಮಿಕ್ಕು ನಾಟಕಗಳನ್ನು ರಂಗದ ಮೇಲೆ ತಂದು ಯಶಸ್ವಿ ನಿರ್ದೇಶಕರಾಗಿ ಹೆಸರು ಮಾಡಿದರು. ಶಿಸ್ತುಬದ್ಧವಾಗಿ ನಾಟ್ಯ ಶಿಕ್ಷಣದ ಹಿನ್ನೆಲೆಯಲ್ಲಿ ತುಂಬಾ ಶ್ರಮ ವಹಿಸಿ ಅನೇಕ ರಂಗ ಪ್ರಯೋಗಗಳನ್ನು ಮಾಡಿದರು. ಸ್ವತಃ ಲೇಖಕರಾಗಿ ಅನೇಕ ನಾಟಕಗಳನ್ನು ಬರೆದು ಆಡಿಸಿ ಹೊಸ ತಲೆಮಾರಿನ ಯುವಕರಲ್ಲಿ ರಂಗಾಸಕ್ತಿ ಮೂಡಿಸಿದರು. ಅವರು ಬರೆದ ರಜಪೂತ ಪವಾಡ, ಕುಲಗೌರವ, ರೂಪದರ್ಶನ, ಗುಡ್ಡದಭೂತ, ಭಗ್ನಮಂದಿರ ಮೊದಲಾದ ನಾಟಕಗಳು ತಂತ್ರದ ದೃಷ್ಟಿಯಿಂದ ಗಟ್ಟಿಯಾದವು; ರಂಗಭೂಮಿಗೆ ಹೇಳಿ ಮಾಡಿಸಿದಂಥವು. ಸುವರ್ಣ ಅವರು ಪರಿಪೂರ್ಣತೆಗಾಗಿ ಸದಾ ಹಂಬಲಿಸುತ್ತಾ ಬಂದವರು. ರಂಗಕ್ಕೆ ಹೊಸ ಬೆಳಕು ನೀಡಿದ ಅವರ ಸಾಧನೆಗಳು ಸೃಜನಶೀಲ ವ್ಯಕ್ತಿಗಳಿಗೆ ಒಂದು ಸ್ಫೂರ್ತಿ. ಮುಂಬಯಿಯ ಕನ್ನಡಿಗರ ಸಾಂಸ್ಕೃತಿಕ ಬದುಕಿಗೆ ಅರ್ಥಪೂರ್ಣ ಚಾಲನೆ ನೀಡಿದ ಸುವರ್ಣರು ವಿನಯಸಂಪನ್ನರು,ಸರಳ ಸಜ್ಜನಿಕೆಯ ಅಪೂರ್ವ ಚೇತನ.

**ಬೆಳ್ಳಿ ತೆರೆಯ ಬದುಕು:** ಸದಭಿರುಚಿಯ ಕನ್ನಡ ಸಿನಿಮಾಗಳನ್ನು ಚಿತ್ರರಸಿಕರಿಗೆ ಉಣಬಡಿಸಿದ ಕೀರ್ತಿಗೂ ಸುವರ್ಣ ಅವರು ಭಾಜನರಾಗಿದ್ದಾರೆ. ಸುವರ್ಣರು ಬರೆದ 'ಗುಡ್ಡದ ಭೂತ' ನಾಟಕ ನಾಡಿನಲ್ಲೆಡೆ ಜನಪ್ರಿಯವಾಯಿತು. ಇದರಿಂದ ಉತ್ತೇಜನ ಪಡೆದ ಅವರು ಒಂದು ಸಸ್ಪೆನ್ಸ್ ಸಿನಿಮಾ ಮಾಡಲು ಹೋಗಿ ಕೈಸುಟ್ಟುಕೊಂಡರು. ಆದರೂ ಧೃತಿಗೆಡದೆ ಸಾಲಸೋಲ ಮಾಡಿ ಪ್ರೊ. ಯು. ಆರ್. ಅನಂತಮೂರ್ತಿ ಅವರ ಸಣ್ಣ ಕಥೆಯಾಧಾರಿತ ಘಟಶ್ರಾದ್ಧ ಚಿತ್ರವನ್ನು ನಿರ್ಮಿಸಿದರು. ಗಿರೀಶ್ ಕಾಸರವಳ್ಳಿಯವರ ಮೊದಲ ನಿರ್ದೇಶನದ ಈ ಘಟಶ್ರಾದ್ಧ ರಾಜ್ಯಪ್ರಶಸ್ತಿ, ರಾಷ್ಟ್ರಪ್ರಶಸ್ತಿ, ಜರ್ಮನಿಯ ಅಂತಾರಾಷ್ಟ್ರೀಯ ಪ್ರಶಸ್ತಿ ಹೀಗೆ

ಹದಿನೆಂಟು ಪ್ರಶಸ್ತಿಗಳನ್ನು ಗಳಿಸಿ ದಾಖಲೆ ಮಾಡಿತು. ಮತ್ತೆ ಹೊಸ ಹುರುಪಿನಿಂದ ಪೂರ್ಣಚಂದ್ರ ತೇಜಸ್ವಿ ಅವರ ಸಣ್ಣ ಕಥೆಯನ್ನು ಆಧರಿಸಿ ಕುಬಿ ಮತ್ತು ಈಯಾಲ ಎಂಬ ಚಿತ್ರವನ್ನು ಸುವರ್ಣ ನಿರ್ದೇಶಿಸಿದರು. ಇದಕ್ಕೆ ಶ್ರೇಷ್ಠಚಿತ್ರ, ಶ್ರೇಷ್ಠ ನಿರ್ದೇಶಕ ಮತ್ತು ಶ್ರೇಷ್ಠ ಕತೆ, ಹೀಗೆ ಮೂರು ರಾಜ್ಯ ಪ್ರಶಸ್ತಿಗಳು ಬಂದುದಲ್ಲದೆ ಇದು ಅಂತಾರಾಷ್ಟ್ರೀಯ ಚಿತ್ರೋತ್ಸವದ ಪನೋರಮ ವಿಭಾಗದಲ್ಲೂ ಪ್ರವೇಶ ಪಡೆಯಿತು. ಇದಲ್ಲದೆ ತಬರನ ಕತೆ, ಮನೆ, ಕ್ಷೌರ ಮುಂತಾದ ಪ್ರಶಸ್ತಿ ವಿಜೇತ ಚಿತ್ರಗಳ ನಿರ್ವಾಹಕ ನಿರ್ಮಾಪಕರಾದ ಸುವರ್ಣ ಜನಪ್ರಿಯ ಧಾರಾವಾಹಿ ಗುಡ್ಡದ ಭೂತ ನಿರ್ಮಿಸಿ ನಿರ್ದೇಶಿಸಿದ್ದಲ್ಲದೆ ಕೆಲವು ಗುಣಮಟ್ಟದ ಸಾಕ್ಷ್ಯ ಚಿತ್ರ ಮತ್ತು ಜಾಹೀರಾತು ಚಿತ್ರಗಳನ್ನೂ ನಿರ್ದೇಶಿಸಿದ್ದಾರೆ. ಕೆಲವು ಸಿನಿಮಾ ಅಭಿರುಚಿಯ ಗೆಳೆಯರೊಂದಿಗೆ ದೃಷ್ಟಿ ಫಿಲ್ಮ್ ಸೊಸೈಟಿಯನ್ನು ಕಟ್ಟಿ ಬೆಳೆಸಿದರು. ಸುಮಾರು ಆರು ವರ್ಷಗಳ ಕಾಲ ಅನೇಕ ಪ್ರಶಸ್ತಿ ವಿಜೇತ, ಗುಣಮಟ್ಟದ ಪ್ರಾದೇಶಿಕ ಚಿತ್ರಗಳನ್ನು ಪ್ರದರ್ಶಿಸಿ ಈ ಸಂಸ್ಥೆ ಸದಭಿರುಚಿಯ ಪ್ರೇಕ್ಷಕವರ್ಗದ ನಿರ್ಮಾಣಕ್ಕೆ ಕಾರಣವಾಯಿತು.

ಮುಂಬಯಿಯಲ್ಲಿ ಕನ್ನಡ ರಂಗಭೂಮಿಯ ಜಾಗೃತಿಗಾಗಿ ಹವ್ಯಾಸಿ ರಂಗಭೂಮಿಯ ಏಳಿಗೆಗಾಗಿ ಶ್ರಮಿಸುತ್ತಾ ಬಂದವರು ಸುವರ್ಣ. ಸಾಹಿತ್ಯದಲ್ಲಿಯೂ ಅವರಿಗೆ ವಿಶೇಷ ಆಸಕ್ತಿ. ನಾಟಕಗಳಲ್ಲದೆ ಚಿನ್ನದ ಗೊಂಬೆ ಎಂಬ ಕಥಾ ಸಂಕಲನವೂ ಬೆಳಕು ಕಂಡಿದೆ. 'ಉರುಳು' ಇವರ ಒಂದು ಒಳ್ಳೆಯ ಅನುವಾದಿತ ನಾಟಕ. ಇಂಗ್ಲಿಷ್, ಬಂಗಾಲಿ ಮತ್ತು ಹಿಂದಿಯಿಂದಲೂ ನಾಟಕವನ್ನು ರೂಪಾಂತರಿಸಿದ್ದಾರೆ. ಇವರ ಉತ್ತಮ ಅನುವಾದವೂ ಸಹ ಮೂಲಕೃತಿಯಷ್ಟೇ ಮಹತ್ವದ್ದು. ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನವೊಂದನ್ನು ಸ್ಥಾಪಿಸಿ ಮುಂಬೈಯಲ್ಲಿ ಕಾರಂತ ಉತ್ಸವ ಮೊದಲಾಗಿ ಹತ್ತು ಹಲವು ಕನ್ನಡ ಕಾರ್ಯಕ್ರಮಗಳನ್ನು ರೂಪಿಸಿ ಮುಂಬೈಯಲ್ಲಿ ಕನ್ನಡತನ ಮಂಕಾಗದಂತೆ ನೋಡಿಕೊಂಡರು.ಮುಂಬೈ ವಿಶ್ವವಿದ್ಯಾಲಯದಲ್ಲಿ ಕಾರಂತ ದತ್ತಿನಿಧಿಯನ್ನು ಸ್ಥಾಪನೆ ಮಾಡಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಶಿವರಾಮ ಕಾರಂತರ ಯಶೋಗಾಥೆಯನ್ನು ಬಿಂಬಿಸುವ ಸುದೀರ್ಘ ಸಾಕ್ಷ್ಯಚಿತ್ರ ನಿರ್ಮಾಣ ಅವರ ಮತ್ತೊಂದು ಮಹತ್ವದ ಸಾಧನೆ.ಗೋರೆಗಾಂವ್ ಕರ್ನಾಟಕ ಸಂಘದಲ್ಲಿ 'ರಂಗಸ್ಥಳ' ಎಂಬ ವೇದಿಕೆಯ ಮೂಲಕ ಯುವ ಕಲಾವಿದರಿಗೆ ರಂಗ ತರಬೇತಿ ನೀಡಿ ಹೊಸ ಹುಮ್ಮಸ್ಸು ನೀಡಿದರು.ಸುವರ್ಣಗಿರಿ ಪ್ರಕಾಶನದ ಮೂಲಕ ಹತ್ತಾರು ಬಹು ಮೌಲಿಕ ಕೃತಿಗಳನ್ನು ಪ್ರಕಟಿಸಿ ಯುವ ಪ್ರತಿಭೆಗಳನ್ನು ಲೋಕಮುಖಕ್ಕೆ ಪರಿಚಿಸಿದರು.ಸುವರ್ಣ ಅವರ ಬಹುಮುಖ ಪ್ರತಿಭೆಯನ್ನು ಮನ್ನಿಸಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಸತ್ಕರಿಸಿದ್ದು ಅರ್ಹ ವ್ಯಕ್ತಿಗೆ ಸಂದ ಗೌರವವಾಗಿದೆ. ಇದಲ್ಲದೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ (2000), ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ(2002) ಗುರುನಾರಾಯಣ ಪ್ರಶಸ್ತಿಯನ್ನೂ ಪಡೆದ ಸುವರ್ಣರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದು ಉಲ್ಲೇಖನೀಯ ಅಂಶ.ಹೊರನಾಡಿನಲ್ಲಿ ಕನ್ನಡ ರಂಗಭೂಮಿಯ ಬಲವರ್ಧನೆಗೆ ತನು ಶುದ್ಧ ಮನ ಶುದ್ಧ ಭಾವ ಶುದ್ಧವಾಗಿ ಬಹುಕಾಲ ಶ್ರಮಿಸಿದ ಸದಾನಂದ ಸುವರ್ಣ ಅವರ ಜೀವನ ಸಾಧನೆ ನಾಡಿಗೆ ಮಾದರಿ.ಇತ್ತೀಚಿಗೆ ಅವರ ಸಾಧನೆಗೆ ಸಂದ ಇನ್ನೊಂದು ದೊಡ್ಡ ಗೌರವ ಈ ಬಾರಿಯ ಕರ್ನಾಟಕ ಸರಕಾರ ನೀಡಿದ ಬಿ. ವಿ. ಕಾರಂತ ಪ್ರಶಸ್ತಿ.ಕನ್ನಡ ಕೈಂಕರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದ ಹಿರಿಯ ಚೇತನ ಸದಾನಂದ ಸುವರ್ಣ ಅವರ ನಿಧನದಿಂದ ನಾಡು ನುಡಿಗೆ ದೊಡ್ಡ ನಷ್ಟವಾಗಿದೆ.

# ಕನ್ನಡ ಕಲಾಕೇಂದ್ರ, ಮುಂಬಯಿಯಿಂದ ಸುವರ್ಣ ನಮನ!

ಮುಂಬೈ ಕನ್ನಡ ರಂಗಭೂಮಿಯ ಮಹಾನ್ ಚೇತನ ಸದಾನಂದ ಸುವರ್ಣರ ಒಡನಾಟ, ಮಾರ್ಗದರ್ಶನ ಪಡೆದಿದ್ದ ಕಲಾ ಕೇಂದ್ರದ ಕಲಾವಿದರೆಲ್ಲ ತಮ್ಮ ನೆಚ್ಚಿನ ಗುರುವಿಗೆ ಹೃದಯ ತುಂಬಿ ನುಡಿನಮನಗಳನ್ನು ಸಲ್ಲಿಸಿದರು.

ಮೈಸೂರ್ ಅಸೋಸಿಯೇಶನ್ ಕಿರು ಸಭಾಂಗಣದಲ್ಲಿ ನಡೆದ ಕಾರ್ಯಕ್ರಮ ಕಲಾವಿದರ, ಮುಂಬೈ ಕನ್ನಡಿಗರ ಹೃದಯಗಳಿಂದ ಹೊಮ್ಮಿದ ಪ್ರೀತಿ, ಗೌರವದ ಪ್ರತೀಕವಾಗಿತ್ತು.

ಮೈಸೂರ್ ಅಸೋಸಿಯೇಶನ್ ನ ಡಾ.ಮಂಜುನಾಥ್ ಹಾಗೂ ಮಂಜುನಾಥಯ್ಯ, ಸರಾಫ್, ನಿತ್ಯಾನಂದ ಕೋಟ್ಯಾನ್, ಸಾಯಿ ಬಲ್ಲಾಳ್, ದಯಾಸಾಗರ್ ಚೌಟ, ಸುರೇಂದ್ರ ಕುಮಾರ್ ಹೆಗ್ಡೆ, ಅಶೋಕ್ ಸುವರ್ಣ, ಎಸ್.ಕೆ.ಸುಂದರ್, ಭರತ್ ಕುಮಾರ್ ಪೊಲಿಪು, ಮೋಹನ್ ಮಾರ್ನಾಡ್, ಗೋಪಾಲ್ ತ್ರಾಸಿ ಹಾಗೂ ಕಲಾಕೇಂದ್ರದ ಅಧ್ಯಕ್ಷ ಮಧುಸೂದನ್ - ಎಲ್ಲರೂ ತಮ್ಮ ಹೃದಯದ ಮಾತುಗಳನ್ನು ಹಂಚಿಕೊಂಡರು. ಸಾಯಿ ಬಲ್ಲಾಳ್ ಅವರು ಸುವರ್ಣರ ಜೊತೆಗಿನ ತಮ್ಮ ಒಡನಾಟದ ಬಗ್ಗೆ ಬಹಳ ಆರ್ದ್ರವಾಗಿ, ಪ್ರಭಾವ ಪೂರ್ಣವಾಗಿ ತಮ್ಮ ಅನುಭವಗಳನ್ನು ಹಂಚಿಕೊಂಡು, ಪುಣೆಯಲ್ಲಿ ತಾವು ರೂಪಿಸಲೆಳಸಿರುವ ಆಂಫಿ ಥಿಯೇಟರ್ ನಲ್ಲಿ ತನ್ನ ಕಲಾ ಗುರು ಸದಾನಂದ ಸುವರ್ಣರ ಮೂರ್ತಿ ಒಂದನ್ನು ಸ್ಥಾಪಿಸಲಿರುವುದಾಗಿ ಘೋಷಿಸಿದರು.

ದಯಾಸಾಗರ್ ಚೌಟ ಅವರು ತಮ್ಮ ಮಾತಿನಲ್ಲಿ ಸುವರ್ಣರ ಮಾನವೀಯ ಮುಖದ ಅನಾವರಣ ಮಾಡಿದರು. ಧಾರಾವಿಯ ಕನ್ನಡ ಶಾಲಾ ಮಕ್ಕಳಿಗಾಗಿ ಅವರು ಕೊಡುಗೈಯಿಂದ ಹತ್ತುಸಾವಿರ ರೂಪಾಯಿಗಳನ್ನು ದಾನವಿತ್ತುದನ್ನೂ, ಅಂತಹ ಅವರ ಇನ್ನೆಷ್ಟೋ ಮಾನವೀಯ ನಡೆಯನ್ನೂ ಶ್ರುತ ಪಡಿಸಿದರು.

ಗಿರೀಶ್ ಕಾಸರವಳ್ಳಿ ಅವರು ಓಂದಾಸ್ ಕಣ್ಣಂಗಾರ್ ಅವರ ಕೋರಿಕೆಯಂತೆ ಕಳಿಸಿದ ಸುವರ್ಣರಿಗೆ ತಮ್ಮ ನುಡಿನಮನದ ಆಡಿಯೋವನ್ನು ಕಣ್ಣಂಗಾರ್ ಅವರು ಶ್ರುತ ಪಡಿಸಿದರು.

ಮುಂಬೈ ರಂಗಭೂಮಿಯಲ್ಲಿ ತಮ್ಮ ಕೆಲಸ ಮುಗಿದೊಡನೆ ಮಂಗಳೂರಿಗೆ ಹೋಗಿ ಅಲ್ಲಿ ತಮ್ಮ ಕಲಾ ಕಾಯಕವನ್ನು ಮುಂದುವರಿಸಿ ಅಲ್ಲಿನ ರಂಗಭೂಮಿಯನ್ನು ಉದ್ದೀಪಿಸಿದ ಸುವರ್ಣರು ಜಗದ ನಾಟಕ ರಂಗದಿಂದ ನಿರ್ಗಮಿಸಿದ್ದಾರೆ. ಆ ಮಹಾನ್ ಚೇತನಕ್ಕೆ ನಮ್ಮ ಪ್ರೀತಿ, ಗೌರವದ ನಮನ!

## ಕನ್ನಡ ಸಂಘಟಕಿ, ಸಮಾಜ ಸೇವಕಿ, ಸಾಹಿತ್ಯ ಪ್ರೇಮಿ ಗಾಯತ್ರಿ ರಾಮು ನಿಧನ



ಮೈಸೂರು ಅಸೋಸಿಯೇಶನ್ನಿನ ಸದಸ್ಯರಾದ ಲೇಖಕಿ ಶ್ರೀಮತಿ ಗಾಯತ್ರಿ ರಾಮು (75) ಅವರು ಅಲ್ಪಕಾಲದ ಅಸೌಖ್ಯದಿಂದ ಜೂನ್ 28 ರಂದು ಮುಂಬಯಿಯ ಉಪನಗರ ವಸಾಯಿಯ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಮುಂಬಯಿಯ ಕನ್ನಡ ಸಾಹಿತ್ಯ ವಲಯದಲ್ಲಿ, ಕನ್ನಡ ಸಂಘಗಳಲ್ಲಿ ಎಲ್ಲರಿಗೂ ಚಿರಪರಿಚಿತ ರಾಗಿದ್ದ ಕನ್ನಡ ಪ್ರೇಮಿ, ಸಮಾಜ ಸೇವಕಿ. ಇವರು ಮೂಲತಃ ಹಾಸನದವರು. ಕಳೆದ 60 ವರ್ಷದಿಂದ ಮುಂಬಯಿ ವಾಸಿಯಾಗಿದ್ದರು. ಗಾಯತ್ರಿ ರಾಮು ಅವರು ಮುಂಬಯಿಯ ಹಲವಾರು ಕನ್ನಡ ಸಂಘ ಸಂಸ್ಥೆಗಳ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದರು.

ಗಾಯತ್ರಿ ರಾಮು ಅವರು ಪುತ್ರಿ ಮಂಗಳಾ ಶ್ರೀನಾಥ್, ಇಬ್ಬರು ಪುತ್ರರಾದ ಕೃಷ್ಣಪ್ರಸಾದ್ ಮತ್ತು ಆದಿತ್ಯ ಹಾಗೂ ಮೂವರು ಮೊಮ್ಮಕ್ಕಳ ಸಹಿತ ಕನ್ನಡ ಪ್ರೇಮಿಗಳು ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಅವರ ನಿಧನಕ್ಕೆ ಮೈಸೂರು ಅಸೋಸಿಯೇಷನ್ನಿನ ಸದಸ್ಯರು ಹಾಗೂ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ಸಂತಾಪ ಸೂಚಿಸಿದ್ದಾರೆ. ಅವರ ಅಗಲುವಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ದೇವರು ಅವರ ಕುಟುಂಬಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.



# Religion in Indonesia

**by Ben Haryo**

Indonesia is a Muslim Majority Nation. Infact the Nation has highest number of Muslims in the world compared to any other Nation. Next India has the Second highest number of Muslims. But the Indonesian Constitution 1945 allows freedom of religion, and elevated Hinduism, Buddhism, Confucianism, Islam, Catholicism and Protestantism as “Official Religion of the Republic”, which entitled them for government support in their preservation and propagation.

This however does not mean that religions beyond the “Official” are verboten or illegal. Judaism and Sikhism are alive and well in Indonesia with full Government protection, even without the “Official” status.

The rights to change religions, or even to embrace unofficial religions are protected and upholded by the Laws.

In fact, since a 2017 Court Decree that traditional Shamanistic religions (“Kepercayaan”) are recognized by the Republic, Indonesians could declare that they adhere to traditional religions (such as Nature worship, Ancestor worship, spirit worship, Animism etc) and have the Government issue the pertaining documentations.

Most interesting are the recent resurgence of Hinduism in Indonesia. Not long ago, Princess Mahindrani of Javanese Royal Family, and Madame Sukmavati Sukarnoputri (daughter of 1st Indonesian President) returned to Hinduism.



**Former Indonesian President’s Daughter re-converts to Hinduism on October 30, 2021**

30th October 2021 Sukmawati Sukranoputri, the daughter of Indonesian first President, has reconverted from Isalm to Hinduism on 26th October 2021.

Both ladies are connected to Hinduism by lineages, as Madame Sukmavati’s grandmother was a Hindu Brahmin lady from Bali who married a nobleman from Java and converted to Islam, while Princess Mahindrani’s ancestors were Javanese Hindu nobles who converted to Islam in the 15th century for political advantages.

Indonesia: Why did the Princess of Java become Hindu?

Mahindrani Kooswidyanthi Paramasi is the Princess of Java, Indonesia who is known for her lover for music and is also an avid pianist and composer. The Princess of Java went through a Sudhi Wadani Ritual on July 17, 2017 in the Pura Lahur Catur Kanda Pat Sari of Bali. This ritual can be described as an initiated into Hinduism, one of the



major minority religions which are seeing a major boost as many are returning to its fold attracted by its philosophy.
Famous actress Happy Salma also converted from Islam to Hinduism many years ago, to be able to marry a Balinese Hindu noble.
Converting back to Hinduism seems to be an upwards (though slow) trends among Javanese muslims who were descendants of Hindu nobles in the past, who rediscovered the beauty of their ancestral religion.

Most Javanese and Sundanese muslims still recognized that their ancestors were Hindu and Buddhists, and many even still preserve and deeply respect their ancestral culture.





Converting back to ancestral faith seems to find lesser resistance than converting to other Abrahamovic faiths like Christianity or Judaism.
However this also does not stop some individuals to hop from one belief system to another several times. Examples being model Dena Rachman who was a Muslim, then declare herself to be an atheist for some years, but then announced her conversion to Christianity.



Dulu Muslim, Dena Rachman Pernah Ateis dan Kini Memeluk Agama Nasrani
Dena Rachman mengaku pernah menjadi seorang ateis karena mendapat banyak penolakan dan tidak diterima.





Or film star Asmirandah who jumped back and forth from Christianity to islam and back to Christianity.
I expect the trend to be more noticeable among celebrities, due to media exposure.
Shareena Gunawan and Nita Gunawan, both are photomodels, converting from Islam to Christianity. Shareena due to marriage, Nita due to “self discovery”.



# PUZZLES & TEASERS

I. **WORD PUZZLES:**

1. WHAT KIND OF ROOM HAS NO DOORS OR WINDOWS?
2. WHAT KIND OF BALLS DON'T BOUNCE? (IT HAS TWO ANSWERS)
3. IF 3 BOYS CAN EAT 3 BURGERS IN 3 MINUTES, HOW MANY BURGERS WILL 10 BOYS EAT IN 10 MINUTES?
4. TODAY IS SUNDAY AFTER 53 DAYS IT WILL BE A) SUNDAY B) MONDAY C) TUESDAY D) THURSDAY OR E) NONE OF THE ABOVE
5. IF TERESA'S DAUGHTER IS MY DAUGHTER'S MOTHER. WHAT AM I TO TERRESA?

II. **REBUS PUZZLES:** A B







III. **LOGICAL PUZZLES:**

A. IN THIS SERQUENCE WHAT NUMBER WOULD LOGICALLY COME NEXT ? 24846594?
B. HOW DO EIGHT EIGHTS ADD UP TO ONE THOUSAND ?
C. SUSAN AND LISA DECIDED TO PLAY TENNIS AGAINST EACH OTHER. THEY BET $1 ON EACH GAME THEY PLAYED. SUSAN WON THREE BETS AND LISA WON $5. HOW MANY GAMES DID THEY PLAY?
D. THERE ARE THREE PEOPLE (ALEX, BEN AND CODY), ONE OF WHOM IS A KNIGHT, ONE A KNAVE, AND ONE A SPY. THE KNIGHT ALWAYS TELLS THE TRUTH, THE KNAVE ALWAYS LIES, AND THE SPY CAN EITHER LIE OR TELL THE TRUTH. ALEX SAYS: "CODY IS A KNAVE." BEN SAYS: "ALEX IS A KNIGHT." CODY SAYS: "I AM THE SPY." WHO IS THE KNIGHT, WHO THE KNAVE, AND WHO THE SPY?

## PUZZLES & TEASERS ANSWERS

1.**Word Quizzes:** 1.Tido. (Do Re MI Fa So La TiDo), 2. Kiwi, 3. Figure 8, 4. Saturday, 5. Wheat, 6. Two, Four Eight & Nine Sound in Numbers, 7. Y (Year) Seconds, Minutes, Hours, Days, Weeks, Months, Years.

2. **PICTURE PUZZLE: A**. Read every row as follows: (3 + 2) x 2 = 10, (1 + 9) x 2 = 20, (0 + 8) x 2 = 16, (7 + 5) x 2 = 24.
**B**. 50.

3. 1) SON OF A GUN, 2) ADVICE, 3) FREE SHIP, 4) UNFINISHED BUSINESS, 5) 3.

*Compiled by: Mr Ananth Banwasi*

# ಶ್ರೀ ಸ್ವರ್ಣ ಗೌರಿ ಹಾಗೂ ಶ್ರೀ ಮಹಾಗಣಪತಿ ಮಹೋತ್ಸವ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ **1937** ರ ಶ್ರೀ ಕ್ರೋಧಿ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ **ಶುಕ್ರವಾರ 06.09.2024** ರಂದು ಶ್ರೀ ಸ್ವರ್ಣ ಗೌರಿಯನ್ನು ಮತ್ತು ಚತುರ್ಥಿ **ಶನಿವಾರ 07.09.2024** ರಂದು ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ಪಂಚಮಿ **ಭಾನುವಾರ 08.09.2024** ರವರೆಗೆ ಉತ್ಸವವನ್ನು ಅಸೋಸಿಯೇಶನ್ನಿನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ದಿನಾಂಕ **08.09.2024 ನೇ ಭಾನುವಾರ ಬೆಳಿಗ್ಗೆ 9.00** ರಿಂದ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾ ಮಂಗಳಾರತಿ ಮಾಡಿ ನಂತರ ಗೌರಿ ಗಣಪತಿಯನ್ನು ವಿಸರ್ಜಿಸಲಾಗುವುದು. ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಸಹಾಯ ಮಾಡಿ ಭಗವತ್ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಸೇವಾರ್ಥ ಕೊಡಲಿಚ್ಛಿಸುವವರು ತಮ್ಮ ಹೆಸರು, ಜನ್ಮ ನಕ್ಷತ್ರ, ಗೋತ್ರ, ಪೂಜೆ ನೆರವೇರಿಸಬೇಕಾದ ದಿನಾಂಕ ಬರೆದು ನಮ್ಮ ವಿಳಾಸಕ್ಕೆ ದಿನಾಂಕ **31.08.2024** ರೊಳಗೆ ತಲುಪಿಸಿರಿ ಅಥವಾ **email** ಮಾಡಿ.

**ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು**

ವಿ.ಸೂ.

**1.** ಸೇವಾರ್ಥ ನಡೆಸಲಿಚ್ಛಿಸುವವರು **251/-** ರೂ. ಗಳ ಅಥವಾ ಹೆಚ್ಚಿನ ಕಾಣಿಕೆಯನ್ನು (ನಗದು/ಚೆಕ್) ಅಂಚೆ ಮೂಲಕ ಕಳುಹಿಸಬಹುದು ಅಥವಾ ಸ್ವತಃ ಅಸೋಸಿಯೇಶನ್ನಿನ ಕಛೇರಿಗೆ ಬಂದು ನೀಡಬಹುದು.

**2.** ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಮಹಿಳೆಯರು ತಮ್ಮ ಹೆಸರನ್ನು ದಿನಾಂಕ **31.08.2024** ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.

**3.** ಪೂಜೆ ಕಾರ್ಯಕ್ರಮದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ. **3000/-** ವನ್ನು ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.

74th Year of Shri Swarna Gauri and Shri Mahaganapathi Pooja

In keeping with its glorious tradition, your Association is conducting Shri Swarna Gauri and Shri Mahaganapathi Pooja this year also, with all pomp and gaiety from 06th September 2024 to 08th September 2024. This event will be marked by the traditional pooja every morning and cultural programmes followed by traditional pooja in the evenings. The Visarjana will be on 08th September 2024. A detailed programme will be mailed to you in due course. Those desirous of giving “Sevartha” Rs. 251/- or more may please send their cheque to the Mysore Association office, stating the preferred date for pooja along with your name, gotra and nakshatra.

Bank Details:

Name: THE MYSORE ASSOCIATION, BOMBAY

SB A/c No: 54000637287

IFSC code: SBIN0040243

Bank: STATE BANK OF INDIA

Branch: MATUNGA (EAST)

*(ಪುಟ 2ರಿಂದ)*

**ಮೂರನೆಯ ಆಟ :-** ಪುಸ್ತಕವನ್ನು ತಲೆಯ ಮೇಲೆ ಇಟ್ಟುಕೊಂಡು ನಡೆಯುವುದು. ಇದರಲ್ಲಿ ಯಾವ ಗುಂಪಿನ ಸದಸ್ಯರು ಪುಸ್ತಕವನ್ನು ಬೀಳಿಸದೆ ಕಡಿಮೆ ಸಮಯದಲ್ಲಿ ಗುರಿ ಮುಟ್ಟುತ್ತಾರೋ ಅವರಿಗೆ ಬಹುಮಾನ ಕೊಡಲಾಯಿತು.ಈ ಆಟವನ್ನು ಮಕ್ಕಳು ಹಾಗೂ ಎಲ್ಲಾ ಹಿರಿಯ ಸದಸ್ಯರೆಲ್ಲಾ (ಮಂಜುನಾಥಯ್ಯ ಹಾಗೂ ರಾಧಾ ಶಂಕರಲಿಂಗ) ಸವಾಲಾಗಿ ಸ್ವೀಕರಿಸಿ ಎಲ್ಲರಿಂದ ಸೈ ಎನಿಸಿಕೊಡರು.



**ಕೊನೆಯ ಹಾಗೂ ನಾಲ್ಕನೆಯ ಆಟ:-** ಧವಸ ಧಾನ್ಯಗಳನ್ನು ವಿಂಗಡನೆ ಮಾಡುವುದು. ಅಂದರೆ 5 ರೀತಿಯ ಧಾನ್ಯಗಳನ್ನು ಒಂದೇ ತಾಟಿಗೆ ಮಿಶ್ರಣ ಮಾಡಿ ಕೊಟ್ಟು ಅವುಗಳನ್ನು ಬೇರೆ ಬೇರೆ ಮಾಡಿ ಬಟ್ಟಲಿನಲ್ಲಿ ಹಾಕುವುದು. ಯಾವ ಗುಂಪು ಬೇಗ ಧಾನ್ಯಗಳನ್ನು ಬೇರೆ ಮಾಡುತ್ತಾರೋ ಅವರಿಗೆ ಬಹುಮಾನ ಕೊಡಲಾಯಿತು. ಎಲ್ಲ ಸದಸ್ಯರು ತಮ್ಮನ್ನು ತಾವು ಮರೆತು ಮಕ್ಕಳಂತೆ ಆಡುತ್ತಿದ್ದರು.



ಮನೆಯ ದಿನ ಬಳಕೆಯ ಪದಾರ್ಥಗಳನ್ನು ಬಹುಮಾನ ರೂಪವಾಗಿ ಕೊಟ್ಟಿದ್ದು ಎಲ್ಲರಿಂದಲೂ ಪ್ರಶಂಸೆಗೆ ಪಾತ್ರವಾಗಿತ್ತು. ಇದರ ಶ್ರೇಯ ಶ್ರೀಮತಿ ರೇಷ್ಮಾ ಗಣಪತಿ ಹಾಗೂ ವೀಣಾ ಜೋಶಿಯವರಿಗೆ ಸಲ್ಲುತ್ತದೆ. ಈ ಎಲ್ಲಾ ಬಹುಮಾನಗಳನ್ನು ನಮ್ಮ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಕಮಲಾ. ಕೆ. ಹಾಗೂ ಹಿರಿಯ ಸದಸ್ಯರಾದ ಶ್ರೀಮತಿ ಸುಶೀಲಾ, ಡಾ. ಮಂಜುನಾಥ, ಶ್ರೀ ಮಂಜುನಾಥಯ್ಯ, ಶ್ರೀಮತಿ ಪದ್ಮಜಾ ಬನವಾಸಿ ಹಾಗೂ ಶ್ರೀ ಅನಂತ ಬನವಾಸಿ ಹಂಚಿದರು.





ಆಟಗಳ ಮಧ್ಯೆ ಶ್ರೀಮತಿ ಶ್ಯಾಮಲಾ ರಾಧೇಶ್ ಹಾಡುಗಳನ್ನು ಹಾಡಿ ಮನರಂಜಿಸಿದರು. ಇದಲ್ಲದೆ ಶ್ರೀ ಶಶಿಕಾಂತ ಜೋಶಿಯವರು ನಗೆ ಹನಿಯ ಪಟ್ಟಿಯನ್ನು ತೆಗೆದು ಸದಸ್ಯರುಗಳಿಗೆ ನಗಿಸುತ್ತಿದ್ದರು. ಈ ಕಾರ್ಯಕ್ರಮವನ್ನು ಶ್ರೀಮತಿ ರೇಷ್ಮಾ ಗಣಪತಿ ಮತ್ತು ಶೀಲಾ ಕುಂದರ್ ಅವರು ಅಚ್ಚು ಕಟ್ಟಾಗಿ ನಿರ್ವಹಿಸಿದರು. ಅವರಿಗೆ ಮೈಸೂರು ಅಸೋಸಿಯೇಷನ್ನಿಂದ ಅಭಿನಂದನೆಗಳನ್ನು ಸಲ್ಲಿಸಲಾಯಿತು.

ಈ ಕಾರ್ಯಕ್ರಮವನ್ನು ರೂಪಿಸಿದ ಶ್ರೀ ನಾರಾಯಣ ನವಿಲೇಕರ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಅಲ್ಲದೇ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಿಕ್ಕೆ ಸಹಕರಿಸಿದ ಅಸೋಸಿಯೇಷನ್ನಿನ ಸಿಬ್ಬಂದಿಯವರಿಗೂ ಅಭಿನಂದನೆಯನ್ನು ಸಲ್ಲಿಸಲಾಯಿತು. ಕಾರ್ಯಕ್ರಮವು ಸವಿಯೂಟದ ಜೊತೆಗೆ ನಗುವಿನ ಹೊನಲಿನಲ್ಲಿ ಮುಕ್ತಾಯಗೊಂಡಿತು.



# FORTHCOMING PROGRAMMES

## Independence Day Celebration

August 15, 2024 at 10.00 a.m
At Association's Premises.

## KARNATIC CLASSICAL MUSIC COMPETITION

**Competition will be held on Sunday, 25th August 2024 at 10.00 a.m at The Mysore Association Premises.**

**The competition will be held in three age groups:**

(1) 7 yrs. to 10 yrs. (10 years completed as on 31st Aug., 2024)
(2) 10 yrs. to 15 yrs. (15 years completed as on 31st Aug., 2024)
(3) 15 yrs. to 20 yrs. (20 years completed as on 31st Aug., 2024)

01.09.2024 - FOLK SONGS, Devotional Songs and Devaranama Competition Contestant can participate in any two of the categories only

Age groups:

(1) 7 yrs. to 10 yrs. (10 years completed - as on 31st Aug 2024)
(2) 10 yrs. to 15 yrs. (15 years completed as on 31st Aug 2024)
(3) 15 yrs. to 20 yrs. (20 years completed as on 31st Aug 2024)

All songs should be in Kannada language.



## Shree Swarna Gowri & Shree Mahaganpathi Pooja Festival - 2024



**06th September 2024 - 9.30 am** – Shree Swarna Gowri Pratishtapana and Pooja.
**07th September 2024 - 9.30 am** – Shree Mahaganapathi Pratishtapana & Pooja.
**08th September 2024 - 9.30 am** – Pooje and Mangalarathi.
– 10.00 am – Vedaghosha by Vaidikas of Shankar Mutt.
– 12.00 Noon – Maha Mangalarathi.

**Shree Swarna Gowri and Ganapthi Visarjan immersion & Prasada Viniyoga**



ವಿದುಷಿ ಡಾ. ಎಂ. ಎಸ್. ಸುಬ್ಬುಲಕ್ಷ್ಮೀರವರ ಸಂಗೀತ ಕಛೇರಿಗಳಲ್ಲಿ ಸುಮಾರು 55 ವರ್ಷಗಳ ಕಾಲ ಮೃದಂಗ ನುಡಿಸಿದ ಖ್ಯಾತ ಕಲಾವಿದ ಪದ್ಮಶ್ರೀ ಡಾ. ಟಿ. ಕೆ. ಮೂರ್ತಿ ಯವರಿಗೆ ನೂರು ವರ್ಷ ತುಂಬಿದ ಸಂದರ್ಭದಲ್ಲಿ ಷಣ್ಮುಖಾನಂದ ಹಾಲಿನಲ್ಲಿ ಜುಲೈ 21ರಂದು ನಡೆದ ಅದ್ದೂರಿಯ ಪೂರ್ಣಾಭಿಷೇಕ ಸಮಾರಂಭದಲ್ಲಿ ಮೈಸೂರು ಅಸೋಸಿಯೇಷನ್ನಿನ ಹಿರಿಯ ಕಲಾವಿದರಿಗೆ ಗೌರವವನ್ನು ಅರ್ಪಿಸಿತು.

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077